ಶ್ರೀ ರಾಮಚಂದ್ರ ಮಿಷನ್®

ಸೆಪ್ಟೆಂಬರ್ 2010 ಸಂಪುಟ 3 ಸಂಚಿಕೆ 5

India ECHOES
ONE WORLD ONE HUMANITY


ಆಂತರಿಕ ಪ್ರಸಾರಕ್ಕಾಗಿ ಮಾತ್ರ

# ಗುರುಗಳ 84ನೇ ಜನ್ಮದಿನೋತ್ಸವ

## 23ರಿಂದ 26ನೇ ಜುಲೈ, 2010 ಲಖನೌ


60 ಎಕರೆಗಳಿಗಿಂತಲೂ ಅಧಿಕ ಭೂಮಿಯನ್ನು ಹೊಂದಿರುವ ಲಖನೌ ಆಶ್ರಮವು ಭಾರತದಲ್ಲಿಯೇ ಅತ್ಯಂತ ದೊಡ್ಡ ಆಶ್ರಮಗಳಲ್ಲಿ ಒಂದಾಗಿದೆ ಅಲ್ಲದೆ ಅಭ್ಯಾಸಿಗಳಿಗಾಗಿ ಒಂದು ದೊಡ್ಡ ಕಾಲೋನಿಯನ್ನು ಸಹ ಯೋಜನೆಮಾಡಲಾಗಿದೆ. ಈ ಬಾರಿ ವರ್ಷದ ಈ ಅವಧಿಯಲ್ಲಿ ಉಂಟಾಗುವ ಭಾರಿ ಮಳೆಯನ್ನು ಗಮನದಲ್ಲಿಟ್ಟು ಈ ಆವರಣದಲ್ಲಿ ಪೂರ್ವಭಾವಿಯಾಗಿ ಅನೇಕ ಸಿದ್ಧತೆಗಳನ್ನು ಮಾಡಲಾಗಿತ್ತು. ಕಾಂಕ್ರೀಟಿನ ರಸ್ತೆಗಳು ಹಾಗೂ ಮಳೆನೀರಿಗಾಗಿ ಕಾಲುವೆಗಳ ವ್ಯವಸ್ಥೆಯಿಂದ ಅಭ್ಯಾಸಿಗಳಿಗೆ ಎಲ್ಲ ಕಡೆಗೂ ಸುಲಭವಾಗಿ ನಡೆದಾಡಲು ಸಾಧ್ಯವಾಗಿತ್ತು. ಧ್ಯಾನ ಮಂದಿರ, ಭೋಜನಗೃಹ, ಕ್ಯಾಂಟೀನ್ ಮತ್ತು ಇತರ ಮಳಿಗೆಗಳಿಗೆ ಮಳೆನೀರನ್ನು ತಡೆಹಿಡಿಯುವ ಭಾರಿ ಶೀಟ್‌ಗಳನ್ನು ಜೋಡಿಸಲಾಗಿತ್ತು.

ಗುರುಗಳು 21ರ ಮಧ್ಯಾಹ್ನ ಲಕ್ನೋಗೆ ಆಗಮಿಸಿದರು ಹಾಗೂ ಅವರನ್ನು ಬರಮಾಡಿಕೊಳ್ಳಲು ಸುಮಾರು 15,000 ಅಭ್ಯಾಸಿಗಳು ಉಪಸ್ಥಿತರಿದ್ದರು. ಅದೇ ಸಂಜೆ ಗುರುಗಳು ಹೊಸದಾಗಿ ನಿರ್ಮಾಣವಾಗಿದ್ದ ಧ್ಯಾನ ಮಂದಿರವನ್ನು ಬಾಬೂಜಿ ಮಹಾರಾಜರಿಗೆ ಸಮರ್ಪಿಸಿದರು. 15,000 ಚದರ ಅಡಿ ಇರುವ ಧ್ಯಾನ ಮಂದಿರದಲ್ಲಿ 3,000 ಅಭ್ಯಾಸಿಗಳು ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದೆ.



ಗುರುಗಳು ಲಖನೌ ದಲ್ಲಿ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು







'ಪ್ರೇಮ ಹಾಗೂ ಕೃತಜ್ಞತೆ' ಎಂಬ ಪ್ರಧಾನ ವಿಷಯದೊಂದಿಗೆ ಜುಲೈ 23ರಿಂದ ಆರಂಭವಾದ ಉತ್ಸವದಲ್ಲಿ ಭಾರತ ಹಾಗೂ ಇತರೆ ರಾಷ್ಟ್ರಗಳಿಂದ, ಸುಮಾರು 40,000ಕ್ಕೂ ಅಧಿಕ ಅಭ್ಯಾಸಿಗಳು ನೆರೆದಿದ್ದರು. ಉತ್ಸವದಲ್ಲಿ ಪ್ರಮುಖವಾಗಿ ಗುರುಗಳು ಒಟ್ಟು 24 ವಿವಾಹಗಳನ್ನು ನೆರವೇರಿಸಿದರು. ನಮ್ಮ ಮನಸ್ಸನ್ನು ಉತ್ತೇಜಿಸುವಂತಹ ಮೂರು ಭಾಷಣಗಳಿಂದ ಅವರು ನಮ್ಮನ್ನು ಆಶೀರ್ವದಿಸಿದರು. 'ಅನಂತದೆಡೆಗೆ ಸಹಜಮಾರ್ಗ' ಎನ್ನುವ ಬಗ್ಗೆ ಮಾತನಾಡುತ್ತಾ ಅವರು ಹೇಳಿದರು ;

- ★ ಸಹಜಮಾರ್ಗದಲ್ಲಿ 46 ವರ್ಷಗಳ ನಂತರವೂ ನಾನಿನ್ನೂ ಕೊನೆಯಿಲ್ಲದ ಪ್ರಯಾಣದಲ್ಲಿದ್ದೇನೆ. ಸಹಜಮಾರ್ಗದಲ್ಲಿ ನಾವು ಅನಂತದೆಡೆಗೆ ಸಾಗುತ್ತಿದ್ದೇವೆ. ನಾವು ಆ ಅನಂತವನ್ನು ಜಯಿಸಬೇಕು ಹಾಗೂ ಅದನ್ನು ನಮ್ಮ ಮುಷ್ಟಿಯಲ್ಲಿ ಹಿಡಿದಿಡಬೇಕು.
- ★ ಗುರುಗಳು ನಮಗಾಗಿ ಎಲ್ಲವನ್ನೂ ಮಾಡುತ್ತಾರೆ ಎಂದು ನಾವು ತಿಳಿಯುತ್ತೇವೆ. ಆದರೆ ಅವರಿಗೆ ನಮ್ಮಿಂದ 100 ಪ್ರತಿಶತ ಸಹಕಾರ ಇರಬೇಕು. ಆಗ ಅವರ ಸಹಾಯವು 1000 ಪ್ರತಿಶತ ಇರುವುದು.
- ★ ಸಾಧನೆಯಲ್ಲಿಯೇ ಎಲ್ಲವೂ ಮುಗಿದುಹೋಗುವುದಿಲ್ಲ, ಆದರೆ ಸಾಧನೆಯ ಮೂಲಕ ನಾವು ನಮ್ಮ ಅವಲಂಬನೆಯನ್ನು ಗುರುಗಳೆಡೆಗೆ ತಿರುಗಿಸುತ್ತೇವೆ.

25ನೇ ಜುಲೈ 'ಗುರುಪೂರ್ಣಿಮೆ'ಯ ದಿನ, ಅಂದು ಬೆಳಗ್ಗೆ ಗುರುಗಳು ತಮ್ಮ ಭಾಷಣದಲ್ಲಿ ಹೇಳಿದರು:–

- ★ ಇಂದಿನ ದಿನ ಯಾರು ಗುರುಗಳೊಂದಿಗೆ ಇರುವರೋ ಅವರು ಶೀಘ್ರವಾಗಿ ಪ್ರಗತಿ ಹೊಂದುವರು.
- ★ ನಮ್ಮ ಪ್ರಗತಿಗಾಗಿ ನಾವು ಮಾಡಬೇಕಾದುದರ ಬಗೆಗೆ ಹಾಗೂ ನಮ್ಮ ಜವಾಬ್ದಾರಿಗಳ ಬಗೆಗೆ ನಾವು ಅರಿವುಳ್ಳವರಾಗಬೇಕು.

ಭಾಷಣ ನೀಡುವಾಗ ಹಾಗೂ ಮುಗಿದ ನಂತರ ಗುರುಗಳಿಗೆ ಉಸಿರಾಟದ ತೊಂದರೆಯಾಗಿತ್ತು ಹಾಗೂ ಸಂಜೆಯವರೆಗೂ ಅದೇ ಸ್ಥಿತಿಯಲ್ಲಿದ್ದರು. ಕೆಲ ಅಭ್ಯಾಸಿಗಳಿಗೆ ಅವರು ಹೇಳಿದರು "ನಾನು ಅನಾರೋಗ್ಯದಿಂದಿರುವೆನೋ ಗೊತ್ತಿಲ್ಲ ಆದರೆ ನಾನು ಸುಸ್ಥಿತಿಯಲ್ಲಿಲ್ಲ".

ಜುಲೈ 26ರ ಬೆಳಗ್ಗೆ ಗುರುಗಳು ತಮ್ಮ ಮುಕ್ತಾಯ ಭಾಷಣದಲ್ಲಿ ಹೇಳಿದರು:–

- ★ ಬಾಬೂಜಿಯವರು ಹೇಳಿರುವಂತೆ ಒಂದಕ್ಕೆ ಮಾತ್ರ ಕೊನೆಯೆಂಬುದಿಲ್ಲ, ಅದು ಆಧ್ಯಾತ್ಮಿಕ ಜೀವನ, ಏಕೆಂದರೆ ಆತ್ಮವು ದೈವದ ಒಂದು ಅಂಶವಾಗಿರುವುದರಿಂದ ಅಥವಾ ಒಂದು ಕಿಡಿಯಾಗಿರುವುದರಿಂದ ಅದೂ ಸಹ ಶಾಶ್ವತವಾದುದು ಮತ್ತು ಕೊನೆಯಿಲ್ಲದ್ದು.
- ★ ಬಾಬೂಜಿ ಮಹಾರಾಜರು ಹೇಳಿದ್ದಾರೆ 'ಮಮತೆ' (ತಾಯಿಯ ಪ್ರೇಮ) ಯು ಮನುಷ್ಯ ಜೀವನದಲ್ಲಿಯೇ ಅತ್ಯಂತ ಪವಿತ್ರವಾದುದು. ಆದುದರಿಂದಲೇ ನಿಮ್ಮ ಗುರುವನ್ನು ತಾಯಿಯೆಂದು ಸ್ವೀಕರಿಸಿ.
- ★ ನಾವು ಯಾವುದೇ ಪೂರ್ವಾಭಾವನೆಯಿಲ್ಲದೆ, ಪ್ರತಿಯಾಗಿ ಏನನ್ನೂ ನಿರೀಕ್ಷಿಸದೆ ,ಮಾಡುವ ಸೇವೆಯೇ ಪವಿತ್ರವಾದುದು.
- ★ ಅವರ ಹೃದಯವನ್ನು ಸೇರಲು ಸೇವೆಯೇ ಅತ್ಯಂತ ಸುಲಭವಾದ ಮಾರ್ಗ. ಗುರುಗಳಿಗೇನೂ ನಮ್ಮ ಸೇವೆಯ ಅವಶ್ಯಕತೆಯಿಲ್ಲ, ಆದರೆ ಇದು ಸ್ವಾಭಾವಿಕವಾದುದು. ಒಂದು ಮಗು ತನ್ನ ತಾಯಿಗೆ ಸಹಾಯ ಮಾಡುವಂತೆ, ಏಕೆಂದರೆ ಮಗು ಸದಾ ತಾಯಿಯ ಜೊತೆಯಲ್ಲೇ ಇದ್ದು ಅದು ತಾಯಿಯಲ್ಲಿಯೇ ಒಂದಾಗಿಬಿಟ್ಟಿರುತ್ತದೆ.





ಬೆಳಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಸಹೋದರಿಯರಾದ ಅಪರ್ಣ ಘೋಷ್, ರಂಜನ ಮೆಹ್ತಾ, ಮೀನಾ ಮಿಶ್ರಾ ಹಾಗೂ ಸಹೋದರ ಗುರುಪ್ರೀತ್‌ರವರು ಅನೇಕ ಭಜನೆಗಳನ್ನು ಗುರುಗಳಿಗೆ ಸಮರ್ಪಿಸಿದರು. ಇದರ ಜೊತೆಗೆ ಸಹೋದರಿ ಕೆ.ಸೌಮ್ಯರವರಿಂದ ಒಂದು ಭರತನಾಟ್ಯ ಕಾರ್ಯಕ್ರಮ, ಬರೋಡಾದ ಅಭ್ಯಾಸಿಗಳಿಂದ ಸಂತ ಕಬೀರರ ಜೀವನ ಕುರಿತಾದ ಒಂದು ನಾಟಕ ಹಾಗೂ ರಷ್ಯಾದ ಅಭ್ಯಾಸಿಗಳಿಂದ ಒಂದು ಸಂಗೀತ ಕಾರ್ಯಕ್ರಮಗಳಿದ್ದವು.

ಉತ್ಸವವು ಸಂಸ್ಥೆಯ ವಿವಿಧ ಸಮಾರಂಭಗಳಾದ SMRTI, CREST, VBSE, SHPT, ಎಖೋಸ್ ವಾರ್ತಾಪತ್ರ, ವೆಬ್‌ಸೈಟ್ ಹಾಗೂ ಮಾಹಿತಿ ತಂತ್ರಜ್ಞಾನ ತಂಡಗಳ ಸಭೆಗಳು ಹಾಗೂ ಭವಿಷ್ಯದ ಯೋಜನೆಗಳ ತಯಾರಿಗಾಗಿ ಸುಸಂದರ್ಭವಾಗಿತ್ತು. ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸಭೆಯ ನಂತರ ಗುರುಗಳು ಆಗ ತಾನೆ ಬಿಡುಗಡೆ ಮಾಡಿದ್ದ "ದಿವ್ಯಲೋಕದ ಪಿಸುಮಾತುಗಳು ತೃತೀಯ ದರ್ಶನ"ದ ಬಗ್ಗೆ ಮಾತನಾಡುತ್ತಾ "ಇಲ್ಲಿ ನಡೆಯುವುದೆಲ್ಲವೂ ಅವರಿಗೆ ತಿಳಿದಿದೆ. ಇದು ಒಂದು ಮೀನಿನ ಕೊಳವಿದ್ದಂತೆ, ನಾವೆಲ್ಲರೂ ಒಳಗಿದ್ದೇವೆ, ಆದರೆ ನಾವೆಲ್ಲರೂ ಹೊರಗಿನಿಂದ ವೀಕ್ಷಿಸಲ್ಪಡುತ್ತಿದ್ದೇವೆ". ಅವರ ಆರೋಗ್ಯ ಹಾಗೂ ಕೆಲಸಗಳ ಬೇಡಿಕೆಯನ್ನು ಕುರಿತು ಹೇಳುತ್ತಾ ಬಾಬೂಜಿಯವರು ಅವಶ್ಯಕತೆಯಿದ್ದಾಗ ಬ್ರಿಟೀಷ್ ರಾಯಭಾರಿ ಕಛೇರಿಯ ಅನೇಕ ಮಹಡಿಗಳನ್ನು ಹತ್ತಬಲ್ಲವರಾಗಿದ್ದರು ಹಾಗು ಅವರು ಹೇಳುತ್ತಿದ್ದರಂತೆ "ನಾನು ಬಲಹೀನನಾಗಿರಬಹುದು, ನಾನು ಅವಿದ್ಯಾವಂತನಾಗಿರಬಹುದು, ಆದರೆ ಸಂದರ್ಭಗಳು ಬಂದಾಗ ನಾನು ಏನನ್ನಾದರೂ ಮಾಡಬಲ್ಲೆ!" ಇದಕ್ಕೆ ಗುರುಗಳು "ನನ್ನ ಗುರುಗಳು ಮಾಡಿದರಲ್ಲಿ ನೂರರ ಅಥವಾ ಸಾವಿರದ ಒಂದು ಭಾಗದಷ್ಟನ್ನಾದರೂ ನಾನು ಮಾಡಲು ಪ್ರಯತ್ನಿಸುವುದು ಬೇಡವೇ?".

ಗುರುಗಳು ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸುವುದಕ್ಕಾಗಿ ಹಾಗೂ ಅವರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ವಿಶ್ವದೆಲ್ಲೆಡೆಯ ಅಭ್ಯಾಸಿಗಳನ್ನು ಹಾಗೂ ಕಾರ್ಯನಿರ್ವಾಹಕರನ್ನು ಭೇಟಿ ಮಾಡಲು ಸಮಯ ಕಂಡುಕೊಂಡರಲ್ಲದೆ ಅಭ್ಯಾಸಿಗಳನ್ನು (ಹಾಗೂ ಅವರ ಮಕ್ಕಳನ್ನೂ) ವೈಯಕ್ತಿಕವಾಗಿ ಭೇಟಿ ಮಾಡಿ, ಅವರ ಸಮಸ್ಯೆಗಳಿಗೆ ಹಾಗೂ ಪ್ರಶ್ನೆಗಳಿಗೆ ಸಂತೋಷದಿಂದ ಸ್ಪಂದಿಸಿದರು.

ಉತ್ಸವದಲ್ಲಿ ಎಂದಿನಂತೆ ಚಿಣ್ಣರ ಅಂಗಳವು ವಿವಿಧ ಚಟುವಟಿಕೆಗಳಿಂದ ಹಾಗೂ ಉತ್ಸಾಹದಿಂದ ತುಂಬಿತ್ತು. 4,200ಕ್ಕಿಂತಲೂ ಅಧಿಕ ಮಕ್ಕಳನ್ನು ಮ್ಯಾಜಿಕ್, ಬೊಂಬೆಯಾಟ, ಕ್ರೀಡೆಗಳು, ಕಲೆ ಹಾಗು ಹಸ್ತಚಾತುರ್ಯಗಳೂ ಸೇರಿದಂತೆ ಅನೇಕ ಬಗೆಯ ಚಟುವಟಿಕೆಗಳಿಂದ ಅವರಿಗೆ ನಿರಂತರವಾಗಿ ಮನೋರಂಜನೆಯನ್ನು ಒದಗಿಸಲಾಗುತ್ತಿತ್ತು.

ತನ್ನ ಆರೋಗ್ಯ ಹಾಗೂ ಆರಾಮಗಳ ಬಗೆಗೆ ಯೋಚನೆಯೇ ಇಲ್ಲದೆ, ನಮಗಾಗಿ ಎಂದೆಂದಿಗೂ ಶ್ರಮಿಸುತ್ತಿರುವ ತಾಯಿಯಂತೆ, ವಿಶ್ರಾಂತಿಯಿಲ್ಲದೆ ಕಾರ್ಯೋನ್ಮುಖರಾಗಿರುವ, ನಮ್ಮನ್ನೆಲ್ಲ ಒಂದು ಸಂಸಾರದಂತೆಯೂ ಹಾಗೂ ಪ್ರತ್ಯೇಕವಾಗಿಯೂ ನೋಡಿಕೊಳ್ಳುತ್ತಿರುವ ಗುರುಗಳಷ್ಟೇ ಈ ಒಂದು ಸುವ್ಯವಸ್ಥಿತ ಉತ್ಸವದ ಶಾಶ್ವತವಾದ ನೆನಪು.


ಭೋಜನ ಗೃಹ


ಧ್ಯಾನಮಂದಿರ


ಮಕ್ಕಳ ಕೇಂದ್ರ



## ಗುರುಗಳ ಪ್ರವಾಸ

### ಚೆನ್ನೈ

ಗುರುಗಳು ತಮ್ಮ ಹೆಚ್ಚಿನ ಸಮಯವನ್ನು ವಿಶ್ರಾಂತಿ ತೆಗೆದುಕೊಳ್ಳುವುದರಲ್ಲಿ, ಆಶ್ರಮ ಮತ್ತು ತಮ್ಮ ನಿವಾಸಕ್ಕೆ ಓಡಾಡುವುದರಲ್ಲಿ ಕಳೆದರು. ಗಾಯತ್ರಿಯಲ್ಲಿ ಬೆಳಗ್ಗೆ ಹಾಗೂ ಸಂಜೆ ಭೇಟಿ ನೀಡುತ್ತಿದ್ದ ಅಭ್ಯಾಸಿಗಳೊಂದಿಗೆ ಸಮಯ ಕಳೆಯುತ್ತಿದ್ದರು ಹಾಗೂ ಅನೇಕ ಬಾರಿ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಮರೀನಾ ಬೀಚ್‌ಗೂ ಸಹ ಭೇಟಿ ನೀಡಿದರು, ಅಭ್ಯಾಸಿಗಳೊಂದಿಗೆ ಮಾತನಾಡುತ್ತಾ ಹಾಗೂ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಅಲ್ಲಿ ಸ್ವಲ್ಪ ಸಮಯ ಕಳೆದರು. ಅಭ್ಯಾಸಿಯ ಪಾತ್ರ ಹಾಗೂ ಜೀವನದಲ್ಲಿ ನಿರೀಕ್ಷೆಯಿಲ್ಲದೆ ಮಾಡು, ಅದೇ ಕರ್ಮಯೋಗದ ಸಾರ". ಸುಮಾರು 1 ಗಂಟೆಯ ಹೊತ್ತು ನಗೆ ಚಟಾಕಿಗಳು, ಪ್ರಶ್ನೋತ್ತರಗಳು ಹಾಗೂ ಐಸ್‌ಕ್ರೀಂ ಸವೆದ ನಂತರ ಗುರುಗಳು ಅಲ್ಲಿಂದ ಹೊರಡುತ್ತಿರುವಾಗ ಎಲ್ಲ ಅಭ್ಯಾಸಿಗಳು ಅವರನ್ನು ನೋಡುತ್ತಾ ಸಮಯ ಹಾಗೇ ನಿಂತುಹೋಗಬಾರದೇ, ಅದರಿಂದ ಗುರುಗಳೊಂದಿಗೆ ಇನ್ನಷ್ಟು ಸಮಯ ಕಳೆಯಬಹುದೆಂದು ಆಶಿಸುತ್ತಿದ್ದರು. ಶಾಲೆಯ ಹಲವು ಭೇಟಿಗಳ ನಂತರ ಜುಲೈ 8ರಂದು ಗುರುಗಳು ಕೊಲ್ಕತ್ತಾಗೆ ಹೊರಟರು.

### ಸಿಲಿಗುರಿ, ಪಶ್ಚಿಮ ಬಂಗಾಳ.

ಗುರುಗಳು ಜುಲೈ 9 ಮತ್ತು 11ರಂದು ಸಿಲಿಗುರಿ ಆಶ್ರಮಕ್ಕೆ ಭೇಟಿ ನೀಡಿದರು. ಸ್ಥಳೀಯ ಅಭ್ಯಾಸಿಗಳು ಹಾಗೂ ನೇಪಾಳವೂ ಸೇರಿದಂತೆ ಸುತ್ತಮುತ್ತಲಿನ ಕೇಂದ್ರದ ಅಭ್ಯಾಸಿಗಳು ಬಾಗ್‌ಡೋಗ್ರಾಕ್ಕೆ ಗುರುಗಳು ಬಂದಿಳಿದಾಗ ಅವರನ್ನು ಸ್ವಾಗತಿಸಿದರು.







ನೇಪಾಳದ ಪ್ರಜಾಪ್ರಭುತ್ವದಲ್ಲಿ ಸಂಸ್ಥೆಯು ಇತ್ತೀಚೆಗಷ್ಟೇ ನೋಂದಣಿಯಾಯಿತು ಹಾಗೂ ಗುರುಗಳು ಅಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕರಿಗೆ ನೀಡಿದ ಸಂದೇಶದಲ್ಲಿ ಹೀಗೆ ಬರೆದಿದ್ದಾರೆ, "ನೇಪಾಳದ ಜನರಿಗೆ ನಿಶ್ಚಯವಾಗಿ ಇದೊಂದು ಮಹತ್ವದ ದಿನ, ಇದು ಅವರಿಗೆ ಈಗ ತಿಳಿಯದೆ ಇರಬಹುದು, ಈಗ ನಾವು ಇಲ್ಲಿಯ ಜನರಿಗೆ ಪ್ರಾಮಾಣಿಕವಾಗಿ, ಪ್ರೇಮದಿಂದ, ಗುರುಗಳಿಗೆ ಬದ್ಧರಾಗಿ ನಿಜವಾದ ಆಧ್ಯಾತ್ಮಿಕ ಸೇವೆಯನ್ನು ಒದಗಿಸಲು ನಮ್ಮನ್ನು ನಾವು ಸಿದ್ಧ ಪಡಿಸಿಕೊಳ್ಳಬೇಕಾಗಿದೆ". ಇದರ ಫಲವಾಗಿ ನೇಪಾಳದ ನಿರ್ದೇಶಕ ಮಂಡಳಿಯೊಂದಿಗೆ ಹಾಗೂ ಸರ್ವಸದಸ್ಯರ ಮಂಡಳಿಯ ಸದಸ್ಯರೊಂದಿಗೆ ಸಿಲಿಗುರಿ ಆಶ್ರಮದಲ್ಲಿ ಜುಲೈ 10ರಂದ ಮೊಟ್ಟ ಮೊದಲ ಬಾರಿಗೆ ಸಭೆಯು ನಡೆಯಿತು.

ಜುಲೈ 11ರ ಬೆಳಗ್ಗೆ ಗುರುಗಳು ಧ್ಯಾನ ಮಂದಿರದ ಉದ್ಘಾಟನೆಯನ್ನು ಮಾಡಿದರು ಹಾಗೂ ಈ ಸುಸಂದರ್ಭದಲ್ಲಿ ಮಾತನಾಡುತ್ತಾ ಅಭ್ಯಾಸಿಗಳ ಬಾಹ್ಯ ಹಾಗೂ ಅವರ ನಡವಳಿಕೆಯಲ್ಲಿ ಬದಲಾವಣೆಯಾಗಬೇಕೆಂದೂ ಹಾಗಾಗದಿದ್ದಲ್ಲಿ ಉಳಿದೆಲ್ಲವೂ ವ್ಯರ್ಥವೆಂದು ಖಡಾಖಂಡಿತವಾಗಿ ಹೇಳಿದರು. "ನಾನು ಕಳೆದ 40 ವರ್ಷಗಳಿಂದ ಗಮನಿಸಿದ್ದೇನೆ. ನಾವು ಮನುಷ್ಯರಾಗಿ ಯಾವುದೇ ರೀತಿಯಲ್ಲಿ ಸುಧಾರಿಸಿಲ್ಲ, ನಿಮ್ಮ ಅಂತರ್ಯದಲ್ಲಿರುವ ಆಧ್ಯಾತ್ಮಿಕ ಸ್ಥಿತಿಯು ಅವರಿಗೆ ತಿಳಿದಿದೆ, ಆದರೆ ಒಳಗೆ ಮತ್ತು ಹೊರಗೆ ಒಂದೇ ಆಗಿರಬೇಕು, ಅಂತರ್ಯ ಹಾಗೂ ಬಾಹ್ಯದಲ್ಲಿ ಸಮತೋಲನ, ಯೋಚನೆ ಮತ್ತು ಕ್ರಿಯೆಯು ಪರಸ್ಪರ ಸಮತೋಲನವಾಗಿರಬೇಕು, ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಅದನ್ನೇ ಹೇಳಿ, ಏನು ಹೇಳುವಿರೋ ಅದೇ ನಿಮ್ಮ ಮನಸ್ಸಿನಲ್ಲಿರಲಿ. ಇವೇ ಸಹಜಮಾರ್ಗದ ಮೂಲ ಸಿದ್ಧಾಂತಗಳಾಗಿವೆ. ಅಭ್ಯಾಸಿಯ ಈ ಮೂಲಭೂತ ಅವಶ್ಯಕತೆಗಳಿಗೆ ನಮ್ಮ ಪ್ರಶಿಕ್ಷಕರು ಒತ್ತು ಕೊಡುತ್ತಾರೋ ಇಲ್ಲವೋ ಎಂದು ನನಗೆ ಭಯವಾಗುತ್ತದೆ" ಎಂದೂ ಅವರು ಹೇಳಿದರು.

ಸಿಲಿಗುರಿ ಆಶ್ರಮದಲ್ಲಿ ಊಟ ಹಾಗೂ ವಸತಿ ಉಚಿತವಾಗಿರುತ್ತದೆ. ಹಾಗೂ ಅದನ್ನು ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನವು ಒದಗಿಸಿ ಕೊಡುತ್ತದೆ ಎಂದು ಘೋಷಿಸಿದರು. ಪೂರ್ವ ಹಾಗೂ ಉತ್ತರ – ಪೂರ್ವ ರಾಜ್ಯಗಳ ಎಲ್ಲಾ ಅಭ್ಯಾಸಿಗಳು ಅದನ್ನು ಒಂದು ಪುನಃಶ್ಚೇತನ ಕೇಂದ್ರದ ರೀತಿಯಲ್ಲಿ ಉಪಯೋಗಿಸಲಿ ಎಂದೂ ಹಾಗು ಕನಿಷ್ಟ ಪಕ್ಷ 3ರಿಂದ 4 'ಪ್ರಾಂತೀಯ ಕೂಟ'ಗಳು ನಡೆಯಲಿ ಎಂದು ಹಾರೈಸಿದರು.

11ರ ಮಧ್ಯಾಹ್ನ ಗುರುಗಳು ಕೊಲ್ಕತ್ತಾಗೆ ತೆರಳಿದರು. ಕೊಲ್ಕತ್ತಾ ಆಶ್ರಮಕ್ಕೆ ಹೋಗುವ ಮೊದಲು ಸಹೋದರ ಅಜಯ್ ಭಟ್ಟರ್‌ರವರ ಮನೆಯಲ್ಲಿ 2 ದಿನ ಕಳೆದರು. ಜುಲೈ 14ರಿಂದ 19ರವರೆಗೆ ರಷ್ಯಾ ಹಾಗೂ ಇತರೆ ಸಿಐಎಸ್ ದೇಶಗಳ ಸುಮಾರು 300 ಅಭ್ಯಾಸಿಗಳಿಗೆ ಒಂದು ಸಂಕೀರ್ಣವನ್ನು ಏರ್ಪಡಿಸಲಾಗಿತ್ತು. ಬೆಳಗ್ಗೆ 6ರಿಂದ ರಾತ್ರಿ 9ರ ವರೆಗೆ ಜರುಗುತ್ತಿದ್ದ ಸಂಕೀರ್ಣದಲ್ಲಿ ಸತ್ಸಂಗಗಳು, ವೈಯಕ್ತಿಕ ಬೈಠಕ್‌ಗಳು, ವಿವಿಧ ವಿಷಯಗಳ ಬಗ್ಗೆ ಭಾಷಣಗಳು, ಗುಂಪು ಚರ್ಚೆಗಳು ಕಾರ್ಯಕ್ರಮದ ವೇಳಾ ಪಟ್ಟಿಯಲ್ಲಿದ್ದವು. ಗುರುಗಳು ತಮ್ಮ ಕುಟೀರದ ಹುಲ್ಲುಹಾಸಿನ ಮೇಲೆ ಅಭ್ಯಾಸಿಗಳೊಂದಿಗೆ ಸಂಜೆಯ ವೇಳೆ ಸಮಯ ಕಳೆಯುತ್ತಿದ್ದರು. ಅವರು ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು, ಅನೇಕ ಸಂದೇಹಗಳಿಗೆ ಸ್ಪಷ್ಟನೆ ನೀಡಿದರು ಹಾಗು ಅವರ ಜೀವನದಲ್ಲಿನ ಅನೇಕ ಘಟನೆಗಳನ್ನು ವಿವರಿಸಿದರು, ಅವೆಲ್ಲವೂ ಬಹಳ ಆಳವಾದ ತತ್ವಗಳನ್ನು ಹೊಂದಿದ್ದವು.

ಸಂಕೀರ್ಣದಲ್ಲಿ ಅಭ್ಯಾಸಿಗಳು 'ಪರಿವರ್ತನೆ ಹೊಂದಲು ಇಚ್ಛೆ', 'ಸಹಜ ಮಾರ್ಗ ಸಾಧನೆ' ಹಾಗೂ 'ವಿಚಾರಗಳ ಕಾರ್ಯಶಕ್ತಿ' ಈ ವಿಷಯಗಳ ಬಗ್ಗೆ ಭಾಷಣಗಳನ್ನು ನೀಡಿದರು. ಈ ಭಾಷಣಗಳು ಸಾಧನೆಯಲ್ಲಿರುವ ಸೂಕ್ಷ್ಮ ವಿಷಯಗಳು ಹಾಗು ನಮ್ಮ ನಿತ್ಯ ಜೀವನದಲ್ಲಿ ಅವುಗಳ ಪ್ರಭಾವದ ಕುರಿತು ಬೆಳಕು ಚೆಲ್ಲಿದರು. ಭೇಟಿನೀಡಿದ್ದ ಅಭ್ಯಾಸಿಗಳು ಸಹಕಾರ ಹಾಗೂ ಸಹಿಷ್ಣುತೆ ಮನೋಭಾವಗಳಿಗೆ ಒಂದು ಮಾದರಿಯಾಗಿದ್ದರು. ಬಿಸಿ ಹಾಗೂ ಅತ್ಯುಷ್ಣದ ಕೊಲ್ಕತ್ತಾದ ವಾತಾವರಣ ಹಾಗೂ ಪರಿಣಾಮವಾಗಿ ಆರೋಗ್ಯದ ತೊಂದರೆಗಳು ಆಯಾಸಗೊಳಿಸಿದವು. ಏನೇ ಆದರೂ ಈ ಸಂಗತಿಗಳಿಂದ ಅವರು ಗುರುಗಳನ್ನು ಭೇಟಿ ಮಾಡಿದ ಮುಖ್ಯ ಉದ್ದೇಶದಿಂದ ವಿಚಲಿತರಾಗದಂತೆ ನಿರ್ಧಾರ ಮಾಡಿದಂತಿತ್ತು.

## ಜೈಪುರ



ಲಖನೌ ಉತ್ಸವದ ನಂತರ ಗುರುಗಳು ದೆಹಲಿಯಲ್ಲಿ ವಿರಮಿಸಿ ಗುರಗಾಂವ್‌ನಿಂದ 29 ಜುಲೈಯಂದು ಜೈಪುರಕ್ಕೆ ರಸ್ತೆಮಾರ್ಗವಾಗಿ ತಲುಪಿದರು. ಸುಮಾರು 300 ಅಭ್ಯಾಸಿಗಳು ಅವರಿಗೆ ಹಾರ್ದಿಕ ಸ್ವಾಗತವನ್ನು ಕೋರಿದರು ಮತ್ತು ಗುರುಗಳು ನವನಿರ್ಮಿತ ಕುಟೀರವನ್ನು ಉದ್ಘಾಟಿಸಿದರು. ಅವರು ಕುಟೀರದ ಸುತ್ತಮುತ್ತ ತಿರುಗಾಡುತ್ತಾ ನಿರ್ಮಾಣದ ಅನೇಕ ವಿವರಗಳನ್ನು ಕೇಳಿದರು. ಅವರು ರಸ್ತೆ ಪ್ರಯಾಣದ ನಂತರ ಎಂದೂ ತಾವು ಉಲ್ಲಸಿತರಾಗಿದ್ದು, ಕೇವಲ ಒಂದು ಘಂಟೆಯ ವಿಮಾನ ಪ್ರಯಾಣದಲ್ಲಿ ದಣಿವಾಗುವುದೆಂದು ಹೇಳಿದರು. ಅವರು ಪಡಸಾಲೆಯ ಉಯ್ಯಾಲೆಯಲ್ಲಿ ಕುಳಿತು ಗುಂಪುಗೂಡಿದ ಅಭ್ಯಾಸಿಗಳೊಡನೆ ಮಾತನಾಡಿದರು.

ಸಂಜೆ ಅವರು ಕುಟೀರದಿಂದ ಹೊರಬಂದು ಒಂದು ಘಂಟೆಯ ಕಾಲ ಹುಲ್ಲುಹಾಸಿನಲ್ಲಿ ಕುಳಿತು ನಡೆಸಿದ ಅನೌಪಚಾರಿಕ ಸಂವಾದದಲ್ಲಿ ಅವರು ತಾವು ಯಾವುದೇ ಸಂದರ್ಭದಲ್ಲೂ ಸಂತೋಷವಾಗಿರುವುದಾಗಿ ಹೇಳಿದರು. ಪ್ರತಿಯೊಬ್ಬರೂ ಎಲ್ಲಾ ಸಂದರ್ಭದಲ್ಲಿಯೂ ಯಾವಾಗಲೂ ಸಂತೋಷವಾಗಿರಬೇಕು.






ಜೈಪುರ ಧ್ಯಾನಮಂದಿರ


ಜೈಪುರ: ಕುಟೀರದ ಹುಲ್ಲುಹಾಸು

30ರಂದು ಗುರುಗಳು ಹೊಸ ಧ್ಯಾನಮಂದಿರವನ್ನು ಉದ್ಘಾಟಿಸಿ ಅದನ್ನು ತಮ್ಮ ಗುರುಗಳಾದ ಬಾಬೂಜಿ ಮಹಾರಾಜರಿಗೆ ಸಮರ್ಪಿಸಿದರು. ಅವರು ಬೆಳಿಗ್ಗೆ 9ಘಂಟೆಗೆ ರಾಜಸ್ಥಾನ, ಹೊರದೇಶಗಳು ಮತ್ತು ಸಮೀಪದ ರಾಜ್ಯಗಳ ಅಭ್ಯಾಸಿಗಳು ಹಾಜರಿದ್ದಂತೆ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಅವರು ಗಾಲ್ಫ್ ಗಾಡಿಯಲ್ಲಿ ಆಶ್ರಮದೆಲ್ಲೆಡೆ ಸಂಚರಿಸಿದರು. ಗ್ರಾಮ ಸರಪಂಚರು ಮತ್ತಿತರರು ತಮ್ಮ ಸಾಂಪ್ರದಾಯಿಕ ಪದ್ಧತಿಯಲ್ಲಿ ಅವರನ್ನು ಸ್ವಾಗತಿಸಿದಾಗ ಗುರುಗಳು ಅವರಿಗೆ ಪ್ರಸಾದ ನೀಡಿ ಅವರನ್ನು ಹರಸಿದರು.

ಸಾಯಂಕಾಲ ಗುರುಗಳು ಹುಲ್ಲುಹಾಸಿನಲ್ಲಿ ಒಂದು ಘಂಟೆಯ ಕಾಲ ಕುಳಿತು ಅನೇಕ ಅಭ್ಯಾಸಿಗಳೊಡನೆ ಮಾತನಾಡಿ, ಮಕ್ಕಳು ಹೇಳಿದ ಕವಿತೆಗಳು ಮತ್ತು ಹಾಡುಗಳನ್ನು ಕೇಳಿದರು ಹಾಗೂ ಅಭ್ಯಾಸಿಗಳ ಪ್ರಶ್ನೆ ಮತ್ತು ವಿಚಾರಣೆಗಳಿಗೆ ಉತ್ತರಿಸಿದರು.

31ರ ಮುಂಜಾನೆ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ಸಂಜೆ ಅವರು 200ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದ ಸಾಗರದಾಚೆಯ ಅಭ್ಯಾಸಿಗಳನ್ನು ತಮ್ಮ ಕುಟೀರಕ್ಕೆ ಕರೆಸಿ ಬೈಠಕನ್ನು ನೀಡಿದರು.

ಆಗಸ್ಟ್ 1ರಂದು ಗುರುಗಳು ಮುಂಜಾನೆಯ ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಸೋ. ರಂಜನಾರವರ ಭಜನೆಗಳನ್ನು ಆಲಿಸಿದ ನಂತರ ಗುಂಪನ್ನುದ್ದೇಶಿಸಿ ಮಾತನಾಡಿದರು.ಅವರು ಆಶ್ರಮದ ಸ್ಥಳ ಮತ್ತು ಪಕ್ಕದ ಮಾಸ್ಟರ್ಸ್ ಕ್ರಿಯೇಷನ್ ಎಂಬ ಕಾಲೊನಿಯಲ್ಲಿ ಸಂಚರಿಸಿದರು. ಆಶ್ರಮವು 10 ಎಕರೆಯದಾಗಿದ್ದು ಕಾಲೊನಿಯು 20 ಎಕರೆ ಪ್ರದೇಶವಾಗಿದೆ.

ಆ ದಿನ ಗುರುಗಳು ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದರು. ಮಧ್ಯಾಹ್ನ 3 ಘಂಟೆಗೆ ಅವರು ಮುಂಬೈಗೆ ವಿಮಾನದಲ್ಲಿ ಪಯಣಿಸಿದರು. ತಂಗಿದಷ್ಟು ದಿನವೂ ಅವರು ಕಚೇರಿ ಕೆಲಸಗಳು, ಮೇಲ್ಗಳಿಗೆ ಉತ್ತರಿಸುವುದು ಮತ್ತು ಇತರೆ ಆಡಳಿತ ಕಾರ್ಯಗಳಲ್ಲಿ ವ್ಯಸ್ತರಾಗಿದ್ದರಲ್ಲದೆ ಹಲವು ಪ್ರಶಿಕ್ಷಕರನ್ನೂ ತಯಾರು ಮಾಡಿದರು.

## ಮುಂಬಯಿ

ಗುರುಗಳು ಆಗಸ್ಟ್ 1ರಂದು ಮುಂಬೈಗೆ ಭೇಟಿ ನೀಡಬಯಸಿದಾಗ ಅಲ್ಲಿನ ಅಭ್ಯಾಸಿಗಳು ಆನಂದಚಕಿತರಾದರು. ಬಹಳಷ್ಟು ಜನ ಆಗತಾನೇ ಲಖನೌದಿಂದ ಹಿಂತಿರುಗಿದ್ದು ಭಾರೀ ಮಳೆಯ ನಡುವೆಯೂ ಗುರುಗಳ ಆಗಮನದ ತಯಾರಿ ನಡೆಸಿದರು.

ಪನ್ವೇಲ್ ಆಶ್ರಮದಲ್ಲಿ ಮುಂಬೈ ಮತ್ತು ಸಮೀಪದ ಕೇಂದ್ರಗಳ ಸುಮಾರು 1500 ಅಭ್ಯಾಸಿಗಳು ಜಮಾಯಿಸಿದ್ದರು.

ಗುರುಗಳು ಜೈಪುರದಿಂದ ಸಂಜೆ 7.20ಕ್ಕೆ ತಲುಪಿ ನೇರವಾಗಿ ಆಶ್ರಮಕ್ಕೇ ಹೊರಟರು. ಉತ್ಸಾಹೀ ಯುವತಂಡದ ವಿಶೇಷ ಸ್ವಾಗತ ಗೀತೆಯೊಂದಿಗೆ ಗುರುಗಳನ್ನು ಸ್ವಾಗತಿಸಲಾಯಿತು. ಅವರು ಎಲ್ಲರ ನಡುವೆ ಸಂತೋಷ ಮತ್ತು ಉಲ್ಲಸಿತರಾಗಿದ್ದರು. ತಮ್ಮ ವಿಶ್ರಾಂತಿಯನ್ನೂ ಕಡೆಗನಿಸಿ ಅವರು ಮೊದಲು ಅಭ್ಯಾಸಿಗಳನ್ನು ಭೇಟಿಮಾಡುವುದಾಗಿ ಹೇಳಿದರು. ಅವರ ಒಂದು ನೋಟಕ್ಕಾಗಿ ಕಾತರಿಸುತ್ತಿರುವ ಅನೇಕರ ಹೃದಯದಾಸೆಯನ್ನು ಈಡೇರಿಸಲು ಅವರು ಭೋಜನಾಲಯಕ್ಕೆ ಬಂದರು.


ಪನ್ವೇಲ್ ಆಶ್ರಮ


LMOIS ಶಾಲೆಯ ಹಾಸ್ಟೆಲ್ ವಿದ್ಯಾರ್ಥಿಗಳೊಂದಿಗೆ

ಮರುದಿನ ಬೆಳಿಗ್ಗೆ ಧ್ಯಾನಮಂದಿರದ ಪಕ್ಕದಲ್ಲಿರುವ ಮಾಳಿಗೆಯಲ್ಲಿ ಕುಳಿತುಕೊಳ್ಳುವ ಮೂಲಕ ಎಲ್ಲರನ್ನೂ ಚಕಿತಗೊಳಿಸಿದರು. ಕೆಲ ಕಾಲ ತಂಪುಹವೆಯನ್ನು ಆಸ್ವಾದಿಸಿದ ನಂತರ ಅವರು ನೇರ ಧ್ಯಾನಮಂದಿರಕ್ಕೆ ತೆರಳಿ ಒಂದು ತಾಸು ಸತ್ಸಂಗವನ್ನು ನಡೆಸಿಕೊಟ್ಟರು. ದಿನಪೂರ್ತಿ ಅವರು ಅಭ್ಯಾಸಿಗಳನ್ನು ಭೇಟಿಯಾಗುವುದರಲ್ಲಿ ಮತ್ತು ತಮ್ಮ ಕೆಲಸಕಾರ್ಯಗಳಲ್ಲಿ ವ್ಯಸ್ತರಾಗಿದ್ದರು. 3.30ಕ್ಕೆ ಅಭ್ಯಾಸಿಗಳು ಅವರನ್ನು ಭೋಜನಾಲಯದಲ್ಲಿ ಎಲ್ಲರೊಂದಿಗೆ ಚಹಾ–ಔತಣಕ್ಕೆ ಆಹ್ವಾನಿಸಿದರು. ಗುರುಗಳು ಎಲ್ಲರೊಡನೆ ಅರ್ಧ ಘಂಟೆಯ ಕಾಲ ಕುಳಿತು ಲಘುಆಹಾರದೊಡನೆ ಕಾಫಿಯನ್ನು ಆಸ್ವಾದಿಸಿದರು. ನಂತರ ಅವರು 5.30ಕ್ಕೆ ಸತ್ಸಂಗ ನಡೆಸಿಕೊಟ್ಟರು.

3ನೇ ತಾರೀಖಿನಂದು ಬೆಳಿಗ್ಗೆ ಅವರು 7.30ರ ಸತ್ಸಂಗದ ನಂತರ ವಿವಾಹವೊಂದನ್ನು ಸಂಪನ್ನಗೊಳಿಸಿದರು. ಅವರು ಸರಳತೆ ಮತ್ತು ಸಂತೃಪ್ತಿಯ ಅಗತ್ಯದ ಬಗ್ಗೆ ಗಾಢಚಿಂತನೆಯ, ವಿಚಾರವಂತ ಉಪನ್ಯಾಸವೊಂದನ್ನು ನೀಡಿದರು. ನಂತರ ಗುರುಗಳು ಕೆಲವು ಖಾಸಗಿಭೇಟಿಗಳ ಸಲುವಾಗಿ ತೆರಳಿ ನಂತರ ಆಗಸ್ಟ್ 5ರಂದು ಚೆನ್ನೈಗೆ ಹೊರಟರು.

## ಚೆನ್ನೈ

ಗುರುಗಳು ತಮ್ಮ ಜನ್ಮದಿನೋತ್ಸವದ ನಂತರ ಆಗಸ್ಟ್ 5ರಂದು ಲಖನೌದಿಂದ ಚೆನ್ನೈಗೆ ಮರಳಿದರು. ಅವರು ದಿನಾಂಕ 8 ಭಾನುವಾರದಂದು ಸತ್ಸಂಗವನ್ನು ನಡೆಸಿದಾಗ ಎಲ್ಲರ ಮುಖದಲ್ಲೂ ಸಂತಸವು ಎದ್ದು ಕಾಣಿಸುತ್ತಿತ್ತು. ಅವರು ಆಗಸ್ಟ್ 9ರಂದು "ಗಾಯತ್ರಿ"ಗೆ ತೆರಳಿದರು ಹಾಗೂ ಅಲ್ಲಿ ಸಂಜೆಯ ಸಮಯದಲ್ಲಿ ಅಭ್ಯಾಸಿಯ ಕರ್ತವ್ಯಗಳು, ವಿವಿಧ ಸಂಸ್ಕೃತಿಗಳು ಈ ರೀತಿಯಾಗಿ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು.

14ರ ಸಂಜೆ ಅವರು LMOIS ಶಾಲೆಯ ಹಾಸ್ಟೆಲ್‌ಗೆ ಭೇಟಿ ನೀಡಿದರು ಹಾಗೂ ವಿದ್ಯಾರ್ಥಿಗಳೊಂದಿಗೆ ರಾತ್ರಿಯ ಭೋಜನವನ್ನು ಮಾಡಿದರು. ಗುರುಗಳು ಬಹಳ ಉತ್ಸಾಹದಲ್ಲಿದ್ದರು ಹಾಗೂ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಒಂದು ಭಾಷಣವನ್ನು ನೀಡಿ ಆಗ ತಾನೆ ವಿವಿಧ ಶಾಲೆಗಳ ನಡುವಿನ ಹಾಡಿನ ಸ್ಪರ್ಧೆಯಲ್ಲಿ ಒಂದು ಪ್ರಶಸ್ತಿಯನ್ನು ಗೆದ್ದು ಬಂದಿದ್ದ ವಿದ್ಯಾರ್ಥಿಗಳ ಗುಂಪಿನಿಂದ ಒಂದು ಹಾಡನ್ನು ಸಹ ಕೇಳುತ್ತಾ ತಮ್ಮ ಸಮಯವನ್ನು ವಿದ್ಯಾರ್ಥಿಗಳಿಗಾಗಿ ನೀಡುವಲ್ಲಿ ಬಹಳ ಉದಾರಿಗಳಾಗಿದ್ದರು. ಸಂಗೀತವು ಆತ್ಮಕ್ಕೆ ಪುಷ್ಟಿಕೊಡುತ್ತದೆ ಎಂದು ಹೇಳುತ್ತಾ ಸಂಗೀತದ ಮಹತ್ವವನ್ನು ಹೇಳಿದರು ಹಾಗೂ ಶಾಲೆಯ ಬಹಳಷ್ಟು ಸಂಗೀತ ಹಾಗೂ ಹಾಡುವುದರಿಂದ ತುಂಬಿರಲಿ ಎಂದು ಹಾರೈಸಿದರು. ಎಲ್ಲರೂ ಆ ಸಮಯವನ್ನು ಗುರುಗಳೊಂದಿಗೆ ಕಳೆದುದಕ್ಕಾಗಿ ನಿಜವಾಗಿಯೂ ಧನ್ಯರಾದಂತೆ ಅನುಭವಿಸಿದರು.

ಆಗಸ್ಟ್ 16ರಿಂದ 20ರವರೆಗೆ ಮಣಪಾಕ್ಕಂನಲ್ಲಿ ಏರ್ಪಡಿಸಿದ್ದ "ಉತ್ತರ ಅಮೇರಿಕಾದ ಸಂಕೀರ್ಣ"ಕ್ಕೆ 800ಕ್ಕೂ ಹೆಚ್ಚು ಅಭ್ಯಾಸಿಗಳು ಹಾಗೂ ಸುಮಾರು 200ಮಕ್ಕಳು ಉತ್ತರ ಅಮೇರಿಕಾದಿಂದ ಬಂದಿದ್ದರು. ಗುರುಗಳ ಉಪಸ್ಥಿತಿಯಲ್ಲಿ ಸತ್ಸಂಗಗಳು ಹಾಗೂ ಅವರ ಭಾಷಣಗಳು ಸಭೆಯ ಪ್ರಮುಖ ಆಕರ್ಷಣೆಯಾಗಿದ್ದವು. ಸಹೋದರರಾದ ಕಣ್ಣನ್, ಪಿ.ಆರ್. ಕೃಷ್ಣ ಅವರಿಂದ ಭಾಷಣಗಳು, SRCM ಯು ಎಸ್ ಎ ಹಾಗೂ ಕೆನಡಾದ



"ವಾರ್ಷಿಕ ಸರ್ವ ಸದಸ್ಯರ ಮಂಡಳಿಯ ಸಭೆ", ಗುರುಗಳು ಹೊಸ ಅಭ್ಯಾಸಿಗಳನ್ನು ಭೇಟಿ ಮಾಡುವುದು, ಪ್ರಶಿಕ್ಷಕರ ಸಭೆ ಹಾಗೂ ಕಾರ್ಯನಿರ್ವಾಹಕರ ಸಭೆ, ಒಮೆಗಾ ಶಾಲೆಗೆ ಪ್ರವಾಸಗಳು, ಅಭ್ಯಾಸಿಗಳಿಂದ ಪ್ರಶ್ನೋತ್ತರ ಕಾರ್ಯಕ್ರಮ ಹಾಗೂ ಅಭ್ಯಾಸಿಗಳು ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂಕೀರ್ಣದ ಪ್ರಮುಖ ಆಕರ್ಷಣೆಗಳಾಗಿದ್ದವು.


ಯಕ್ಷ ಗಂಧರ್ವರ ಕಥೆಗಳಲ್ಲಿ ಹೇಳುವಂತೆ ಒಂದು ಚಮತ್ಕಾರವೇ ನಡೆದಿತ್ತು. ಮೊದಲನೆಯ ಬೈಠಕದಿಂದಲೇ ನಿಷ್ಪ್ರಯೋಜಕ ಆಲೋಚನೆಗಳನ್ನು ಹಾಗೂ ಮನೆಯ ಚಿಂತೆಗಳನ್ನು ಹೊರಹಾಕುವುದು ಸರ್ವ ಸದಸ್ಯರ ಮಂಡಳಿಯನ್ನು ಉದ್ದೇಶಿಸುತ್ತಾ ಈಗ ನಮ್ಮ ಕೈಯಲ್ಲಿರುವ ಅಪರಿಮಿತ ಅವಕಾಶಗಳನ್ನು ನಾವು ತಕ್ಷಣವೇ ಉಪಯೋಗಿಸಿಕೊಳ್ಳಬೇಕು. ಹಾಗೆಯೇ ಸಂಗ್ರಹಿಸಿ ಇಡಬಾರದು, ಹೇಗೆಂದರೆ 'ಅಳಿಲುಗಳು ಬೀಜಗಳು ಸಿಕ್ಕಾಗ ಅವುಗಳನ್ನು ಎಲ್ಲೋ ಮಣ್ಣಿನಲ್ಲಿ ಮುಚ್ಚಿಡುತ್ತವೆ ಅನೇಕ ಬಾರಿ ಚಳಿಗಾಲದಲ್ಲಿ, ಹಿಮವಿರುವಾಗ ತಿನ್ನದೆ ಹಾಗೇ ಸಂಗ್ರಹಿಸಿದ್ದ ಬೀಜಗಳ ರಾಶಿಯ ಮೇಲೆ ಸತ್ತುಬಿದ್ದಿರುತ್ತವೆ.'

ಸಂಕೀರ್ಣದ ಕೊನೆಯವರೆಗೂ ಗುರುಗಳ ಕುಟೀರದ ಮಹಾದ್ವಾರಗಳನ್ನು ನಿಯತಕಾಲಿಕವಾಗಿ ಪ್ರತಿಯೊಬ್ಬರನ್ನು 'ಪ್ರೇಮ ಜ್ವಾಲೆ'ಯ ಬಳಿ ಕಳುಹಿಸಲು ತೆರೆದಿಡಲಾಗುತ್ತಿತ್ತು. ಈ ವಿಧಾನವು ಬಹಳ ಉದಾರವಾಗಿಯೂ, ಬೋಧಪ್ರದವಾಗಿಯೂ ನಮ್ಮ ಉದ್ದೇಶವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದಕ್ಕಾಗಿಯೇ ಇದೆ ಎಂಬಂತೆ ಭಾಸವಾಯಿತು. ಸಹೋದರ–ಸಹೋದರಿಯರೇ, ನಿಮ್ಮ ನಿಮ್ಮ ರಾಷ್ಟ್ರಗಳನ್ನು ಪರಿವರ್ತನೆಗೊಳಿಸುವುದು ನಿಮ್ಮಿಂದಲೇ ಆರಂಭವಾಗುವುದು ಹಾಗೂ ನಿಮ್ಮಿಂದಲೇ ಅಂತ್ಯಗೊಳ್ಳುವುದು ನಿಮ್ಮ ಹೃದಯಗಳನ್ನು ಅಗಲವಾಗಿ ತೆರೆದಿಡಿ ಮತ್ತೆ ಇನ್ನೆಂದೂ ಅವು ಮುಚ್ಚಿಹೋಗಲು ಬಿಡಬೇಡಿ. ಎಲ್ಲಾ ಎಲ್ಲಾ ಅಭ್ಯಾಸಿಗಳ ಹೃದಯಗಳು ಅವರ ಕೃಪಾಭರಿತ ಪ್ರೇಮದಿಂದ ತುಂಬಿತುಳುಕುವುದರೊಂದಿಗೆ ಹಾಗೂ ಎಲ್ಲರಿಗೂ ಅವರೊಂದಿಗೆ ಇನ್ನೂ ಹೆಚ್ಚಿನ ಸಮಯ ಕಳೆಯಬೇಕೆಂಬ ಉತ್ಕಟವಾದ ಇಚ್ಛೆಯೊಂದಿಗೆ ಆಗಸ್ಟ್ 20ರಂದು ಸಂಕೀರ್ಣವು ಮುಕ್ತಾಯವಾಯಿತು.

## ಹೊಸ ಪ್ರಕಟನೆಗಳು

ಜನ್ಮದಿನೋತ್ಸವದ ಸುಸಂದರ್ಭದಲ್ಲಿ ಅನೇಕ ಹೊಸ ಪ್ರಕಟನೆಗಳು ಬಿಡುಗಡೆಯಾದವು. ಈ ಕೆಳಗೆ ಪಟ್ಟಿ ಮಾಡಿರುವ ಪುಸ್ತಕಗಳನ್ನು ಬಿಡುಗಡೆ ಮಾಡಲಯಿತು.


ಮಕ್ಕಳು ಹಾಗೂ ಪೋಷಕರಿಗಾಗಿ ಜರ್ಮನಿಯ ಸಹೋದರಿ ಬ್ರಿಗೆಟ್ ಸ್ಮಿತ್ ಅವರು ಸಹಜಮಾರ್ಗದ ಹತ್ತು ನಿಯಮಗಳ ಬಗ್ಗೆ ಬಹಳ ಸರಳವಾಗಿ ತಿಳಿಸಿರುವ ಪುಸ್ತಕ, ಇದು ನಿಜವಾಗಿಯೂ ಒಂದು ಕಲಾಕೃತಿಯಾಗಿದೆ.









'ಅವರು, ಹುಕ್ಕಾ ಮತ್ತು ನಾನು' ಸರಣಿಯ ಎರಡನೇ ಭಾಗವಾದ 'ಹಬಲ್ – ಬಬಲ್' ಏಕಕಾಲಕ್ಕೆ 6 ಭಾರತೀಯ ಭಾಷೆಗಳಲ್ಲಿ ಅಂದರೆ ಮರಾಠಿ, ಗುಜರಾತಿ, ಕನ್ನಡ, ತಮಿಳು, ತೆಲುಗು ಹಾಗೂ ಮಲೆಯಾಳಂ ಭಾಷೆಗಳಲ್ಲಿ ಬಿಡುಗಡೆಯಾಯಿತು.





ಸಹಜಮಾರ್ಗ ಎಂದರೇನು
ಸ್ಪಾನಿಶ್





ಸದ್ಗುರುಗಳ ಅಡಿಗಳ ಜಾಡಿನಲ್ಲಿ
– ಆವೃತ್ತಿ ೧ – ಇಟಾಲಿಯನ್





ಪ್ರಶಿಕ್ಷಕರ ಮಾಹಿತಿಸೂಚಿ




ಕಾಲ್ ಆಫ್ ಸ್ಪಿರಿಚ್ಯುವಾಲಿಟಿ
ಆವೃತ್ತಿ ೧ ಮತ್ತು ೨ – ಆಂಗ್ಲ





ಮಾನವನ ಬೆಳವಣಿಗೆಯಲ್ಲಿ
ಗುರುಗಳ ಪಾತ್ರ – ಅಸ್ಸಾಮೀಸ್





ಗುರು ಮತ್ತು ಗುರಿ
ಹಿಂದಿ




ಹೃದಯವಾಣಿ ೨೦೦೫
ಹಿಂದಿ





ಸತ್ಯೋದಯ
ನೇಪಾಳಿ




ಲೀವ್ಸ್ ಫ್ರಮ್ ದ ಟ್ರೀ ಆಫ್
ಲೈಫ್ – ಆಂಗ್ಲ




ಪ್ರಶಿಕ್ಷಕರ ದಿನಚರಿ




ಯುವಜನರ ದಿನಚರಿ

## ಗತಕಾಲಕ್ಕೊಂದು ಇಣುಕುನೋಟ

ಲಾಲಾಜಿ ಮಹಾರಾಜರ ಶತಮಾನೋತ್ಸವ, ಮದ್ರಾಸ್, 1973.





ಗುರುಗಳು ಈ ಸುಸಂದರ್ಭವನ್ನು ಕುರಿತು “ಸದ್ಗುರುವಿನ ಅಡಿಗಳ ಜಾಡಿನಲ್ಲಿ (ಭಾಗ–2)” ಎಂದು ಪ್ರಕಟವಾದ ತಮ್ಮ ದಿನಚರಿಯಲ್ಲಿ ಬಹಳ ಸುಂದರವಾಗಿ ವಿವರಿಸಿದ್ದಾರೆ. ನಮ್ಮ ಪ್ರೀತಿಯ 'ಮಾಮಿ'ಯವರ ನೇತೃತ್ವದ ಒಂದು ಸಾಮೂಹಿಕ ಪ್ರಾರ್ಥನೆಯೊಂದಿಗೆ ಉತ್ಸವವು ಪ್ರಾರಂಭವಾಯಿತು. ನಂತರ ಗುರುಗಳು ಮಧುರೈಯಿಂದ ಉತ್ಸವಕ್ಕೆಂದೇ ತರಿಸಿದ್ದ ಮಲ್ಲಿಗೆ ಮತ್ತು ಗುಲಾಬಿಗಳ ವಿಶೇಷ ಹೂಮಾಲೆಯನ್ನು ಬಾಬೂಜಿ ಮಹಾರಾಜರ ಕೊರಳಿಗೆ ಹಾಕಿದರು. ಲಾಲಾಜಿ ಮಹಾರಾಜರ ರಚನೆಗಳನ್ನು ಒಳಗೊಂಡ ಒಂದು ವಿಶೇಷ ಪುಸ್ತಕ “ಚಿರಂತನ ಸತ್ಯ”ವನ್ನು ಬಿಡುಗಡೆ ಮಾಡಲಾಯಿತು. 10 ರೂಪಾಯಿ ಮೌಲ್ಯದ ಎಲ್ಲಾ 500 ಪ್ರತಿಗಳೂ ಬಿಡುಗಡೆಯಾದ ತಕ್ಷಣವೇ ಮಾರಾಟವಾಗಿದ್ದವು.

ಬಾಬೂಜಿಯವರು ಶತಮಾನೋತ್ಸವದ ವಿಶೇಷ ಸವಿಸಂಚಿಕೆಯಲ್ಲಿ ಪ್ರಕಟವಾಗಿದ್ದ ಒಂದು ಸಂದೇಶವನ್ನು ಓದಿದರು ಎಂಬುದನ್ನು ಗುರುಗಳು ನೆನಪಿಸಿಕೊಳ್ಳುತ್ತಾರೆ. “ಅವರೇ ರಚಿಸಿದ್ದ ಲೇಖನವನ್ನು 20 ನಿಮಿಷಗಳ ಕಾಲ ಓದಿದರು ಹಾಗೂ ಲಾಲಾಜಿಯವರ ಬಗ್ಗೆ ವಿಷಯ ಬಂದಾಗ ಎರಡು ಬಾರಿ ಭಾವಪರವಶರಾಗಿ ಅವರಿಗೆ ಉಸಿರು ಕಟ್ಟಿತ್ತು. ಒಮ್ಮೆ ಕಣ್ಣೀರು ಧಾರಾಕಾರವಾಗಿ ಕೆಳಹರಿಯಿತು, ಇದರಿಂದ ಅವರು ಕಣ್ಣುಗಳನ್ನು ಒರಸಿಕೊಳ್ಳುವುದಕ್ಕಾಗಿ ಓದುವುದನ್ನೇ ನಿಲ್ಲಿಸಿ ಮತ್ತೆ ಮುಂದುವರೆಸಬೇಕಾಯಿತು”. ಗುರುಗಳಲ್ಲಿ ಅವರಿಗೆ ಎಂಥಾ ಪ್ರೇಮ ಹಾಗು ಭಕ್ತಿಯಿದೆ! ಎಂದಾದರೂ ನಮ್ಮ ಗುರುಗಳ ಬಗ್ಗೆ ಈ ರೀತಿಯಾಗಿ ನಾವೂ ಹೊಂದಬಹುದೇ?” ಎಂದು ಬರೆದಿದ್ದಾರೆ.

ಬಾಬೂಜಿಯವರ ಆ ಸಂದೇಶದಿಂದ ನಮ್ಮಲ್ಲಿ ಉಂಟಾದ ಭಾವನೆಯು ವರ್ಣಾತೀತ ಹಾಗೂ ನಮ್ಮ ಜೀವನದ ಗುರಿಯನ್ನು ಹಾಗೂ ನಮ್ಮ ಪ್ರಿಯತಮನೊಂದಿಗಿನ ನಮ್ಮ ಶಾಶ್ವತ ಸಂಬಂಧವನ್ನು ನೆನಪಿಸುವ ನಮ್ಮ ಹೃದಯದ ಆಳಕ್ಕೆ ನಮ್ಮನ್ನು ಕರೆದೊಯ್ಯುತ್ತದೆ.

ಉತ್ಸವದ ಸುವ್ಯವಸ್ಥೆಯನ್ನು ನೋಡಿ ಬಾಬೂಜಿ ಮಹಾರಾಜರು ಎಷ್ಟು ಸಂತುಷ್ಟರಾಗಿದ್ದರು ಎಂದು ಗುರುಗಳು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ ಹಾಗೂ 27ನೇ ಫೆಬ್ರವರಿ, 1973ರಂದು ಅವರು ಹೀಗೆ ಬರೆದಿದ್ದಾರೆ; “ಗುರುಗಳು ಸಂಜೆ ಗಾಯತ್ರಿಗೆ ಬಂದರು ಹಾಗೂ ನಾವಿಬ್ಬರೇ ಇದ್ದಾಗ ನನ್ನನ್ನು ತಬ್ಬಿಕೊಂಡು ಹೇಳಿದರು, “ನಾನು ನಿನ್ನಿಂದ ಬಹಳ ಸಂತುಷ್ಟನಾಗಿದ್ದೇನೆ, ನೀನು ಮಹತ್ಕಾರ್ಯವನ್ನೇ ಮಾಡಿರುವೆ”. ನಾವೂ ಸಹ ನಮ್ಮ ಪ್ರೇಮ, ಭಕ್ತಿ ಹಾಗೂ ಅವರಿಗೆ ಬದ್ಧರಾಗಿ ಗುರುಗಳ ಹೃದಯವನ್ನು ಸಂತೋಷಪಡಿಸೋಣವೆಂದು ಆಶಿಸೋಣ ಹಾಗೂ ಪ್ರಾರ್ಥಿಸೋಣ.

### ಈ ಸುಸಂದರ್ಭದಲ್ಲಿ ನೀಡಿದ ಬಾಬೂಜಿಯವರ ಸಂದೇಶದ ಒಂದು ಭಾಗ;

“ಈ ಸುಸಂದರ್ಭವನ್ನು ನಾವು ಗುರುಗಳು ಮತ್ತು ಅವರೊಬ್ಬರಲ್ಲಿಯೇ ಒಂದಾಗುವುದಕ್ಕೆ ಉಪಯೋಗಿಸಿಕೊಳ್ಳಬೇಕು, ಇದು ನಮಗೆ ನಮ್ಮ ಆಧ್ಯಾತ್ಮಿಕ ವಿಕಾಸಕ್ಕೆ ಆಹಾರ ಹಾಗೂ ಶಕ್ತಿವರ್ಧಕವಿದ್ದಂತೆ, ಸ್ಮರಣೆಯೆಂಬುದು ಹೇಗಿರಬೇಕೆಂದರೆ ಸ್ಮರಣೆಯ ವಿಚಾರಗಳು ನಮ್ಮ ಸುತ್ತಲಿರುವ ಎಲ್ಲ ವಸ್ತುಗಳಿಂದಲೂ ಹೊರನೂಕುತ್ತಿವೆ ಎಂದೆನಿಸಬೇಕು!. ಇದು ಮನುಷ್ಯರು ಮಾಡಬಹುದಾದ ನಿಜವಾದ ಸ್ಮರಣೆ. ಇದು ನಮ್ಮ ಒಳಿತಿಗಾಗಿಯೇ ಇರುವ ಲೀಲೆ.”

“ಒಬ್ಬ ಮನುಷ್ಯ ತನ್ನ ಜೀವನದ ಸಮಸ್ಯೆಗಳನ್ನು ಬಿಡಿಸಬೇಕೆಂದರೆ ಅವನು ತನ್ನ ಮನಸ್ಸಿಗೆ ಸರಿಯಾದ ಸೂಚನೆಗಳನ್ನು ನೀಡಬೇಕು. ಸರಿಯಾದ ಅಭ್ಯಾಸದಿಂದ ಹಾಗೂ ತನ್ನನ್ನು ತಾನು ಸರಿಯಾಗಿ ರೂಪಿಸಿಕೊಳ್ಳುವುದರಿಂದ ಈ ಸ್ಥಿತಿಯು ಬರುತ್ತದೆ. ದೈವೀಸ್ಥಿತಿಯಲ್ಲಿಯೇ ಇರುವುದು ಬಹಳ ಸುಲಭ. ಇದು ವಿಕಾಸದ ನಿಖರವಾದ ವಿಧಾನ. ಸತ್ಯತೆಯನ್ನು ತಲುಪುವುದರೆಡೆಗೆ ಸ್ವಲ್ಪವಾದರೂ ಒಲವು ಇದ್ದಲ್ಲಿ ಭವಿಷ್ಯದ ನಿರ್ಮಾಣವು ಪ್ರಾರಂಭವಾಗುತ್ತದೆ.”

## ರಾಷ್ಟ್ರೀಯ ಪ್ರಬಂಧ ರಚನಾ ಕಾರ್ಯಕ್ರಮ – 2010

ಸಂಯುಕ್ತರಾಷ್ಟ್ರ ಸಂಸ್ಥೆಯ ಅಂತರಾಷ್ಟ್ರೀಯ ಯುವಜನತೆಯ ವರ್ಷದ (ಆಗಸ್ಟ್ 2010ರಿಂದ 2011) ಪ್ರಯುಕ್ತ ಶ್ರೀ ರಾಮಚಂದ್ರ ಮಿಷನ್, ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಾರ್ವಜನಿಕ ಮಾಹಿತಿ ಕೇಂದ್ರ (ಭಾರತ ಮತ್ತು ಭೂತಾನ್) ಇವರ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ವಿದ್ಯಾರ್ಥಿಗಳು ಈ ಕೆಳಕಂಡ ಭಾಷೆಗಳಲ್ಲಿ ಪ್ರಬಂಧಗಳನ್ನು ಬರೆಯಬಹುದಾಗಿದೆ; ಇಂಗ್ಲೀಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ತಮಿಳು ಹಾಗೂ ತೆಲುಗು. ಕಾರ್ಯಕ್ರಮದ ಕುರಿತಾಗಿ ಹಾಗು ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ದಯಮಾಡಿ ನಿಮ್ಮ ವಿದ್ಯಾಸಂಸ್ಥೆಯ ಮುಖ್ಯಸ್ಥರೊಂದಿಗೆ ಮಾತನಾಡಿ ಅಥವಾ essay2010@sahajmarg.org ಈ ವಿಳಾಸಕ್ಕೆ ಇ–ಮೇಲ್ ಕೂಡ ಮಾಡಬಹುದು.

ಇದನ್ನು ಕುರಿತಾದ ಕೈಪಿಡಿಗಳನ್ನು ಹಾಗೂ ಸ್ಥಳೀಯ ಭಾಷೆಯ (ಇಂಗ್ಲೀಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಮ್, ಮರಾಠಿ, ತಮಿಳು, ತೆಲುಗು) ಹಸ್ತಪತ್ರಿಕೆಗಳನ್ನು ಸಂಸ್ಥೆಯ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದಾಗಿದೆ.

“ಉತ್ತಮ ನಡತೆಯಿಂದ ಬದುಕಿಗೆ ಸಂರಕ್ಷಣೆ”

[6ರಿಂದ 9ನೇ ತರಗತಿ]

“ಸ್ವಾತಂತ್ರ್ಯವೆಂದರೆ ಸ್ವೇಚ್ಛಾಪ್ರವೃತ್ತಿಯಲ್ಲ; ತನಗೆ ಯೋಗ್ಯವಾದುದನ್ನು ಆರಿಸಿಕೊಳ್ಳುವ ಜಾಣತನವದು”

[10ರಿಂದ 12ನೇ ತರಗತಿ]

“ಮಹದಾಸೆಯಿಂದ ಆಕಾಂಕ್ಷೆಯೆಡೆಗೆ, ಪಡೆದುಕೊಳ್ಳುವಿಕೆಯಿಂದ ಪರಿವರ್ತನೆಯೆಡೆಗೆ”

[ಕಾಲೇಜುಪದವಿ, ಸ್ನಾತಕೋತ್ತರ]

## ಹೊಸ ನೇಮಕಾತಿಗಳು.

ಪೂಜ್ಯ ಗುರುಗಳು 24 ಆಗಸ್ಟ್ 2010ರಂದು ಈ ಕೆಳಗಿನ ನೇಮಕಾತಿಗಳನ್ನು ಮಾಡಿದ್ದಾರೆ.

ಸಹೋದರ ಪಿ.ಸಿ. ಜೋಹರಿ

ವ್ಯವಸ್ಥಾಪಕರು, ಸಿಲಿಗುರಿ ಆಶ್ರಮ

ಸಹೋದರ ಎಸ್.ಎಸ್. ಮುರ್ಗೋಡ್.

ವ್ಯವಸ್ಥಾಪಕರು, ಕ್ರೆಸ್ಟ್, ಬೆಂಗಳೂರು.

## ಪತ್ರವ್ಯವಹಾರಕ್ಕಾಗಿ ಮಾರ್ಗಸೂಚಿಗಳು.

ಗುರುಗಳೊಂದಿಗೆ ಪತ್ರವ್ಯವಹಾರಕ್ಕಾಗಿ http://www.sahajmarg.org/resources/correspondence-guidelines ನಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಎಲ್ಲಾ ಅಭ್ಯಾಸಿಗಳು ಪರಿಶೀಲಿಸಿ ಅವುಗಳನ್ನು ಪಾಲಿಸುವಂತೆ ವಿನಂತಿಸಿಕೊಳ್ಳುತ್ತೇವೆ.

## ಭಾಷಾಂತರಕಾರರು ಬೇಕಾಗಿದ್ದಾರೆ.

ಎಖೋಸ್ ಇಂಡಿಯಾ ತಂಡಕ್ಕೆ ವಾರ್ತಾಪತ್ರಗಳನ್ನು ಇಂಗ್ಲೀಷ್‌ನಿಂದ ಹಿಂದಿ, ಮರಾಠಿ, ಗುಜರಾತಿ, ಬೆಂಗಾಳಿ, ತೆಲುಗು, ತಮಿಳು, ಕನ್ನಡ ಹಾಗೂ ಮಲೆಯಾಳಂ ಭಾಷೆಗಳಿಗೆ ಭಾಷಾಂತರ ಮಾಡಲು ಸ್ವಯಂಸೇವಕರು ಬೇಕಾಗಿದ್ದಾರೆ. ಸ್ವಯಂಸೇವಕರು ಭಾಷಾಂತರ ಮಾಡುವುದರ ಜೊತೆಗೆ ವಿಷಯಗಳನ್ನು ಟೈಪ್ ಮಾಡಿ ಕೊಡಬೇಕಾಗುತ್ತದೆ.

in.newsletter@srcm.org ಈ ವಿಳಾಸಕ್ಕೆ ತಮ್ಮ ಹಿನ್ನೆಲೆ, ಸಮಯದ ಲಭ್ಯತೆ ಹಾಗೂ ಕಂಪ್ಯೂಟರ್ ಕೌಶಲ್ಯಗಳ ಮಾಹಿತಿಗಳೊಂದಿಗೆ ಈಮೇಲ್ ಕಳುಹಿಸಬಹುದು.

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

ಸೆಪ್ಟಂಬರ್ 2010 ಸಂಪುಟ 3 ಸಂಚಿಕೆ 5


ಯಲಬುರ್ಗಾ

# ಜ್ಞಾನ ಮತ್ತು ಸಾಧನೆಯ ವಿಸ್ತರಣೆ

## ಉತ್ತರ ಕರ್ನಾಟಕ

ನವ ಅಭ್ಯಾಸಿಗಳಿಗಾಗಿ ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಬಸವಕಲ್ಯಾಣ, ಗದಗ, ಬಿಜಾಪುರ, ಯಲಬುರ್ಗಾ, ಹುಬ್ಬಳ್ಳಿ ಮತ್ತು ಧಾರವಾಡ, ಬೇಲೂರು, ಕಲ್ಲೂರು ಮತ್ತು ನವನಗರಗಳಲ್ಲಿ ನಡೆಸಲಾಯಿತು. ಸೋ.ನಿಜಲಿಂಗಪ್ಪ, ಡಾ. ಗಜೇಂದ್ರ ಸಿಂಗ್, ಸೋ.ಅಜಿತ್ ಕಾಮತ್, ಸೋ.ಸುಜಾತಾ ನವಲೆ, ಸೋ.ಗೀತಾ ಡಿ., ಸೋ.ಪ್ರಹ್ಲಾದ್ ಪಾಕ್ಣೀಕರ್, ಸೋ.ಗೀತಾ ರೇಷಮಿ ಮತ್ತು ಸೋ.ರಾಜು ಕಾಶಂಪುರ್‌ಕರ್‌ರವರು SMRTI ನಿಂದ ನೀಡಲಾದ ಹೊಸ ಅಭ್ಯಾಸಿಗಳಿಗಾಗಿ ಕನ್ನಡ ಪ್ರಶಿಕ್ಷಣ ಕಾರ್ಯಕ್ರಮದ ಪ್ರತಿಯ ಹೊರತಾಗಿ ಶ್ರವಣ-ದೃಶ್ಯ ಮಾಧ್ಯಮಗಳ ಮೂಲಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.


ಬಸವಕಲ್ಯಾಣ



ಗದಗ

ಸಹಜಮಾರ್ಗ ಸಾಧನೆಯ ಮೂಲತತ್ವಗಳು, ಧ್ಯಾನ, ಶುದ್ಧೀಕರಣ, ದಿನಚರಿಯ ದಾಖಲೆ, ಪ್ರಾರ್ಥನೆ ಮತ್ತು ಭಂಡಾರಗಳು, ನಮ್ಮ ಮಿಷನ್ನಿನ ಗುರಿ, ನಮ್ಮ ಗುರುಗಳ ಲಘು ಪರಿಚಯ, SMSFನಂತಹ ಸೋದರ ಸಂಸ್ಥೆಗಳು ಮತ್ತು ಅವುಗಳ ಕಾರ್ಯವಿಧಾನಗಳ ಬಗ್ಗೆ ಮಾಹಿತಿ, SMRTI, ಕ್ರೆಸ್ಟ್ ಮತ್ತು ರಿಟ್ರೀಟ್ ಕೇಂದ್ರಗಳನ್ನು ಕಾರ್ಯಕ್ರಮದಲ್ಲಿ ಪರಿಚಯಿಸಲಾಯಿತು.

## ಆಂಧ್ರ ಪ್ರದೇಶ

ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮದ ಮೊದಲ ಹಂತವನ್ನು ಜುಲೈ 18ರಂದು ಕರ್ನೂಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸುಮಾರು 21 ಅಭ್ಯಾಸಿಗಳು ಭಾಗವಹಿಸಿದರು. ಭಾಗಿಗಳು ಹೆಚ್ಚಾಗಿ ತರುಣರೂ ಹಾಗೂ ಕಳೆದ ಒಂದು ವರ್ಷದಿಂದ ಸಹಜಮಾರ್ಗ ಸಾಧನೆಯನ್ನು ಪ್ರಾರಂಭಿಸಿದವರಾಗಿದ್ದರು. ಕಾರ್ಯಕ್ರಮವನ್ನು ಬಲು ಉತ್ಸಾಹದಿಂದ ಸ್ವೀಕರಿಸಲಾಯಿತು. ಗುರುಗಳ ಶ್ರವಣ-ದೃಶ್ಯ ತುಣುಕುಗಳು ಭಾಗಿಗಳಲ್ಲಿ ಸಾಧನೆಯ ಕುರಿತು ಮೂಡಿದ ಅನೇಕ ಸಂದೇಹಗಳಿಗೆ ಪರಿಹಾರ ನೀಡಿದವು. ಅವರು ಈ ಕಾರ್ಯಕ್ರಮವು ಬಹಳ ಲಾಭದಾಯಕವಾದದ್ದು ಹಾಗು ಇದರಿಂದ ತಾವು SMSF ನ ಚಟುವಟಿಕೆಗಳಾದ ಕ್ರೆಸ್ಟ್, ರಿಟ್ರೀಟ್ ಕೇಂದ್ರಗಳ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಯಿತೆಂದು ಅಭಿಪ್ರಾಯಪಟ್ಟರು.


ಕರ್ನೂಲ್

ಆಗಸ್ಟ್ 8ರಂದು 30 ಅಭ್ಯಾಸಿಗಳಿಗಾಗಿ ಎಮ್ಮಿಗನೂರಿನಲ್ಲಿ ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮದ ಮೊದಲ ಹಂತವನ್ನು ತೆಲುಗಿನಲ್ಲಿ ಪೂರ್ಣದಿನ ನಡೆಸಲಾಯಿತು. 80 ಅಭ್ಯಾಸಿಗಳೊಡನೆ ಎಮ್ಮಿಗನೂರು ಪ್ರಗತಿಶೀಲ ಕೇಂದ್ರವಾಗಿದೆ. ಭಾಗಿಗಳು ಸಹಜಮಾರ್ಗ ಸಾಧನೆಯನ್ನು ಕಳೆದ ಒಂದು ವರ್ಷ ಅಥವಾ ಹೆಚ್ಚಿನ ಕಾಲ ಅಭ್ಯಾಸ ಮಾಡಿದವರಾಗಿದ್ದರು. ಬಹಳಷ್ಟು ಜನಕ್ಕೆ ಇದು ಅವರ ಅಭ್ಯಾಸ ಪ್ರಾರಂಭಿಸಿದ್ದಾಗಿನಿಂದ ನಡೆದ ಮೊದಲನೇ ಪ್ರಶಿಕ್ಷಣ ಕಾರ್ಯಕ್ರಮವಾದರೂ ಅಭ್ಯಾಸಿಗಳು ಬಲು ಚೆನ್ನಾಗಿ ಪ್ರತಿಸ್ಪಂದಿಸಿದರು.


ಎಮ್ಮಿಗನೂರ್

## ತಮಿಳುನಾಡು

ತಿರುಪ್ಪೂರಿನ ಚೆಟ್ಟಿಪಾಳ್ಯಂನ ಯೋಗಾಶ್ರಮದಲ್ಲಿ ಜೂನ್ 25ರಿಂದ 27ರವರೆಗೆ ಮೂರು ದಿನದ ಪ್ರಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತಮಿಳುನಾಡಿನ 19 ಕೇಂದ್ರಗಳಿಂದ ಬಂದ 69 ಅಭ್ಯಾಸಿಗಳು ಭಾಗವಹಿಸಿದ್ದರು. ದಕ್ಷಿಣ ತಮಿಳುನಾಡಿನ ವಲಯಮುಖ್ಯಸ್ಥರಾದ ಸೋ.ವಿಶ್ವನಾಥರವರು ಸ್ವಾಗತ ಭಾಷಣ ಮಾಡಿದರು. ಸೋ. ಧಾನುಮೂರ್ತಿ ಮತ್ತು ಸೋ.ರಮ್ಯಾ ರಾಮಪ್ರಭುರವರು ತಮಿಳಿನಲ್ಲಿ ನಡೆಸಿಕೊಟ್ಟ ಕಾರ್ಯಕ್ರಮವು ಸಹಜಮಾರ್ಗ ಸಾಧನೆ, ಶುದ್ಧೀಕರಣ ಮತ್ತು ಪ್ರಾರ್ಥನೆಯ ಮೇಲೆ ಕೇಂದ್ರೀಕೃತವಾಗಿತ್ತು. ಎರಡನೇ ದಿನ ಸೋ. ಅನಂತರವರು ನಡೆಸಿಕೊಟ್ಟ 'ಶಿಸ್ತು ಮತ್ತು ವಿಧೇಯತೆ'ಯ ನಂತರ ರವಿ ಸುಬ್ಬಯ್ಯರವರು 'ಸತತ ಸ್ಮರಣೆ'ಯ ಮೇಲೆ ಉಪನ್ಯಾಸ ನೀಡಿದರು. ಮಧ್ಯಾಹ್ನದ ಕಾಲಾವಧಿಯಲ್ಲಿ ಸೋ.ರಾಧಾಕೃಷ್ಣನ್‌ರವರು 'ವಿಶ್ವಾಸ' ಕುರಿತು ಮಾತನಾಡಿದರು. ಮೂರನೇ ದಿನ ಭಾನುವಾರದ ಸತ್ಸಂಗದಂದು ಸೋ. ರಮ್ಯಾರವರು ಹತ್ತು ನಿಯಮಗಳನ್ನು ವಿವರಿಸಿದರು. ಸೋ. ವಿಶ್ವನಾಥ ರಾವ್ ಮತ್ತು ಸೋ. ಪ್ರಕಾಶ್‌ರವರ ಪ್ರೇರಣಾತ್ಮಕ ಉಪನ್ಯಾಸಕಗಳೊಡನೆ ಕಾರ್ಯಕ್ರಮವು ಸಮಾಪ್ತವಾಯಿತು. ಭಾಗಿಗಳು ಈ ಕಾರ್ಯಕ್ರಮವು ಬಹಳ ಲಾಭದಾಯಕವಾಯಿತೆಂಬ ಅನಿಸಿಕೆ ವ್ಯಕ್ತ ಪಡಿಸಿದರು.


ತಿರುಪ್ಪೂರ್

## ಗೃಹ ಸಮಾವೇಶಗಳು ಮತ್ತು ಮುಕ್ತಸಭೆಗಳು

### ಗುಲಬರ್ಗಾ, ಉ.ಕರ್ನಾಟಕ

ಜೂನ್ 23ರಂದು ಗುಲ್ಬರ್ಗಾದ ಸೋ. ರಾಧಾಬಾಯಿ ಕುಲಕರ್ಣಿಯವರ ಮನೆಯಲ್ಲಿ ಗೃಹ ಸಮಾವೇಶವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಆರು ಆಕಾಂಕ್ಷಿಗಳು ಹಾಜರಾಗಿದ್ದರು. ಸೋ. ಮೀರಾ ಕುಲಕರ್ಣಿಯವರು ಸಹಜಮಾರ್ಗದ ವಿವಿಧ ಅಂಶಗಳ ಬಗ್ಗೆ ಮಾತನಾಡಿದರು. ಸೋ. ಮನೋಹರ್ ಸಿಂಗ್‌ರವರು ಪ್ರಶ್ನೋತ್ತರವನ್ನು ನಡೆಸಿಕೊಟ್ಟರು. ನಾಲ್ವರು ಸಾಧನಾಕಾಂಕ್ಷಿಗಳು ಅದೇ ದಿನ ಸಾಧನೆಯನ್ನು ಪ್ರಾರಂಭಿಸಿದರು. ಆ ಅವಧಿಯಲ್ಲಿ ಮನೆಯಲ್ಲೆಲ್ಲ ಸಂತೋಷದಾಯಕ ವಾತಾವರಣವಿತ್ತು.

ಗಂಗಾವತಿ ತಾಲೂಕಿನ ಯಲಬುರ್ಗಾದಲ್ಲಿ ಜುಲೈ 11ರಂದು ಸಂಜೆ ಸತ್ಸಂಗದ ನಂತರ ಮುಕ್ತಸಭೆಯನ್ನು ಆಯೋಜಿಸಲಾಗಿತ್ತು. 10 ಆಕಾಂಕ್ಷಿಗಳು ಭಾಗವಹಿಸಿದ್ದರು. ಸೋ.ರಾಜು ಕಾಶಂಪುರ್‌ಕರ್, ಸೋ. ರಾಜುಲಾಲ್ ಮತ್ತು ಸೋ. ನಿಜಲಿಂಗಪ್ಪರವರು ಈ ಸಂದರ್ಭದಲ್ಲಿ ಮಾತನಾಡಿದರು. ಸ್ಥಳೀಯ ಪ್ರಶಿಕ್ಷಕರಾದ ಸೋ. ರುದ್ರಪ್ಪರವರು ಉಪಸ್ಥಿತರಿದ್ದರು. ಬಹಳಷ್ಟು ಜನ ಸಾಧನೆಯನ್ನು ಪ್ರಾರಂಭಿಸಲು ಆಸಕ್ತಿ ತೋರಿದರು.

### ಚಿಕ್ಕಮಗಳೂರು, ದ.ಕರ್ನಾಟಕ

ಆಗಸ್ಟ್ 15ರಂದು ಚಿಕ್ಕಮಗಳೂರಿನ ಅಭ್ಯಾಸಿಗಳು ಮತ್ತು ಕೆಲವು ಆಕಾಂಕ್ಷಿಗಳು ಅಭ್ಯಾಸಿಯೋರ್ವರ ಮನೆಯಲ್ಲಿ ಸೇರಿದ್ದರು. ಸೋ. ಸತ್ಯನಾರಾಯಣರವರು ಮೂರು Mಗಳ ಬಗ್ಗೆ ಆಕಾಂಕ್ಷಿಗಳಿಗೆ ವಿವರಿಸಿದ್ದರಿಂದ ಅವರಿಗೆ ಪ್ರೇರಣೆ ದೊರಕಿತು.

ಪದ್ಧತಿಯ ಅನೇಕ ಅಂಶಗಳ ಬಗ್ಗೆ ಅಭ್ಯಾಸಿಗಳು ಮಾತನಾಡಿದ ನಂತರ ಗುರುಗಳ ಡಿವಿಡಿಯನ್ನು ತೋರಿಸಲಾಯಿತು. ಸೋ. ಮೈನಾರವರು ಹಳೆಯ ಸಹಜದೀಪದಲ್ಲಿ ಗುರುಗಳು ಚಿಕ್ಕಮಗಳೂರಿನಲ್ಲಿ ಅಭ್ಯಾಸಿಯೊಬ್ಬರ ತೋಟದಮನೆಗೆ ಭೇಟಿ ನೀಡಿದ ಬಗೆಗಿನ ಪ್ರಕಟಿತ ಲೇಖನದ ತುಣುಕನ್ನು ಓದಿದರು. ಇದರಿಂದ ಪ್ರೇರಿತರಾದ ಸೋ. ಕೆ.ಯು.ಶೆಟ್ಟಿರವರು ಅಭ್ಯಾಸಿಗಳ ಬಗ್ಗೆ ಗುರುಗಳ ಕಾಳಜಿಯ ಕುರಿತು ಕೆಲವು ದೃಷ್ಟಾಂತಗಳೊಡನೆ ವಿವರಿಸಿದರು.

ಕಾರ್ಯಕ್ರಮದ ಮುಕ್ತಾಯದಲ್ಲಿ ಅಭಾಸಿಗಳಿಗೆ ಧ್ಯಾನದಲ್ಲಿ ಕುಳಿತು ಪ್ರತಿಯೊಬ್ಬ ಅಭ್ಯಾಸಿಯೂ ಮಿಷನ್ನಿನ ಕಾರ್ಯಕ್ಕೆ ಕೈಗೂಡಿಸಬಹುದೆಂದು ಆಲೋಚಿಸಲು ಹೇಳಲಾಯಿತು. ಅಲ್ಲಿ ಒಂದು ಆಶ್ರಮ ನಿರ್ಮಾಣ ಮಾಡಬೇಕು ಮತ್ತು ಪ್ರತೀ

## ಫಲದಾಯಕ ಪೂರ್ಣದಿನ


ತ್ರಿಶೂರ್


ಇಂದೋರ್


ಹಾಸನ

### ತ್ರಿಶೂರ್ ,ಕೇರಳ

ಜುಲೈ 4ರಂದು ತ್ರಿಶೂರಿನ ಯೋಗಾಶ್ರಮದಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳು ಪ್ರಾಮಾಣಿಕತೆ ಮತ್ತು ಸತ್ಯದ ಬಗ್ಗೆ ಕಿರುನಾಟಕವನ್ನು ಪ್ರಸ್ತುತಪಡಿಸಿದರು. ತನ್ನ ಪ್ರಜೆಗಳಲ್ಲಿ ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ಹುಡುಕುವ ರಾಜನ ಕಥೆಯು ನಮ್ಮ ದೈನಂದಿನ ಜೀವನದಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಯ ಮೌಲ್ಯವನ್ನು ಎತ್ತಿ ತೋರಿಸಿತು. ಮಕ್ಕಳು ನಾಟಕವನ್ನು ಮಾಡಿದ ಉತ್ಸುಕತೆಯನ್ನು ಗಮನಿಸಿದರೆ ಅವರಲ್ಲಿ ಅಡಕಗೊಂಡ ಮೌಲ್ಯಗಳು ಅವರನ್ನು ಸಹಜಮಾರ್ಗದ ಭವಿಷ್ಯದ ಆಶಾಜನಕ ಅಭ್ಯರ್ಥಿಗಳನ್ನಾಗಿ ಮಾಡುತ್ತವೆ.

ನಂತರ ಪ್ರದರ್ಶಿಸಲಾದ ಗುರುಗಳ ಡಿವಿಡಿಯಲ್ಲಿ ಅವರು ಆಧ್ಯಾತ್ಮಿಕ ಪ್ರಯಾಣದಲ್ಲಿ ನೋವು ಹೇಗೆ ಅಗತ್ಯವಾಗಿದೆ ಎಂದು ವಿವರಿಸಿದ್ದಾರೆ. ಕೇಂದ್ರ ಮುಖ್ಯಸ್ಥರಾದ ಸೋ. ಟಿ.ಪಿ.ನಾರಾಯಣನ್‌ರವರು ಗುರುಗಳ ಉಪನ್ಯಾಸವನ್ನು ಮಲಯಾಳಂಗೆ ಭಾಷಾಂತರಿಸಿದರು. ಅಭ್ಯಾಸಿಗಳು 'ವ್ಯಕ್ತಿತ್ವದ ಅನಾವರಣ'ದಲ್ಲಿನ ಉಪನ್ಯಾಸಗಳಲ್ಲಿನ ಅನೇಕ ವಿಚಾರಗಳನ್ನು ಮಂಡಿಸಿದರು. 1993ರ ಮೊದಲ ಪ್ರಕಟನೆಯ ನಂತರ ಈ ಪುಸ್ತಕವು ಪಾಶ್ಚಿಮಾತ್ಯ ಜನರಿಗೆ ಸಂದೇಶವಾಹಕವಾಗಿದ್ದು 2009ರಲ್ಲಿ ಮರುಪ್ರಕಟಿತವಾದ ಇದು ಜಾಗತಿಕ ಮಟ್ಟದಲ್ಲಿ ಸಂದೇಶ ನೀಡುತ್ತಿದೆ. ಈ ಪುಸ್ತಕವು ನಮ್ಮ ದೈನಂದಿನ ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಹೇಳುತ್ತದೆ. ಇದರ ಸತ್ವವು ಮೌಲ್ಯಾಧಾರಿತ ಅಸ್ತಿತ್ವದ ಬುನಾದಿಯಾದ ಹತ್ತು ನಿಯಮಗಳ ವಿಶದ ವಿವರವಾಗಿದೆ. ಸಂಜೆಯ ಸತ್ಸಂಗದೊಂದಿಗೆ ಕಾರ್ಯಕ್ರಮದ ಮುಕ್ತಾಯವಾಯಿತು.

### ಹತ್ತು ನಿಯಮಗಳ ಮೇಲೆ ಚರ್ಚೆ, ಇಂದೋರ್

ಇಂದೋರ್ ಕೇಂದ್ರದ ಸುಮಾರು 27 ಅಭ್ಯಾಸಿಗಳು ಹತ್ತು ನಿಯಮಗಳ ಸಾಧನೆ ಮತ್ತು ಚರ್ಚೆಯ ಸಲುವಾಗಿ ತಂಡವೊಂದನ್ನು ರಚಿಸಿಕೊಂಡಿದ್ದಾರೆ. ಅದರ ಸದಸ್ಯರು ನಿಯಮಿತವಾಗಿ ಭೇಟಿಯಾಗುತ್ತಾ ನಿಯಮಗಳಲ್ಲಿ ಒಂದನ್ನು ಚರ್ಚಿಸುತ್ತಾರೆ. ನಂತರ ಅವರು ಅದನ್ನು ಸಾಧನೆ ಮಾಡುವ ಪ್ರಯತ್ನ ಮಾಡುತ್ತಾರೆ. ಅವರು ತಮ್ಮಲ್ಲಿ ಅದ್ವಿತೀಯ ಉತ್ಸಾಹವನ್ನು ಕಂಡುಕೊಂಡಿದ್ದಾರೆ. ಸೋ. ಅವಿನಾಶ್ ಕರ್ಮಾರ್ಕರ್ ಮತ್ತು ಸೋ.ರಾಜೇಶ್ ರವೇರ್ಕರ್‌ರವರು ಈ ಚಟುವಟಿಕೆಯ ಹೊಣೆ ತೆಗೆದುಕೊಂಡಿದ್ದಾರೆ.

### ಹಾಸನ, ದ. ಕರ್ನಾಟಕ

ಜುಲೈ 11ರ ಭಾನುವಾರದಂದು ಹಾಸನದಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ನಡೆಸಿಕೊಡಲು ಸೋ. ಶ್ರೀನಿವಾಸ ಮತ್ತು ಸೋ. ಸುಬ್ರಮಣ್ಯರವರನ್ನುಆಹ್ವಾನಿಸಲಾಗಿದ್ದು ಅದರಲ್ಲಿ ಹಾಸನ ಮತ್ತು ಚಿಕ್ಕಮಗಳೂರಿನ 60 ಅಭ್ಯಾಸಿಗಳು ಪಾಲ್ಗೊಂಡರು.

ಸತ್ಸಂಗದ ನಂತರದ ಮೊದಲ ಕಾಲಾವಧಿಯಲ್ಲಿ ಸೋ. ಶ್ರೀನಿವಾಸ್‌ರವರು ಸಹಜಮಾರ್ಗ ಮತ್ತು ಪದ್ಧತಿ ಹಾಗೂ ಗುರುವಿನ ಮಹತ್ವದ ಬಗ್ಗೆ ಮಾತನಾಡಿದರು. ನಂತರದ ಕಾಲಾವಧಿಯಲ್ಲಿ ಸೋ. ಸುಬ್ರಮಣ್ಯರವರು ಚಾರಿತ್ರ್ಯದ ಮಹತ್ವ ಮತ್ತು ಹತ್ತು ನಿಯಮಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯದ ಕುರಿತು ಮಾತನಾಡಿದರು.

ಮಧ್ಯಾಹ್ನ ನಡೆದ ಪ್ರಶ್ನೋತ್ತರ ಕಾಲದಲ್ಲಿಅಭ್ಯಾಸಿಗಳು ತಮ್ಮ ದೈನಂದಿನ ಸಾಧನೆಯಲ್ಲಿ ಉದಯಿಸಿದ ಅನುಮಾನಗಳಿಗೆ ಪರಿಹಾರ ಕಂಡುಕೊಂಡರು. ಹಲವು ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ಸಂಜೆಯ ಸತ್ಸಂಗದೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.


ಬೆಂಗಳೂರು


ಗಾಜ಼ಿಯಾಬಾದ

## ಸಮೂಹ ಚರ್ಚೆ, ಮೊರಾದಾಬಾದ್

ಆಗಸ್ಟ್ 15ರಂದು ಮೊರಾದಾಬಾದ್ ಕೇಂದ್ರದ ಯೋಗಾಶ್ರಮದಲ್ಲಿ ಆಯೋಜಿಸಲಾಗಿತ್ತು. ಸತ್ಸಂಗದ ನಂತರ ನಡೆದ ಚರ್ಚೆಯಲ್ಲಿ ಮೂವತ್ತು ಅಭ್ಯಾಸಿಗಳು ಭಾಗವಹಿಸಿದ್ದರು. ಸೋ. ಅಮಿತ್ ನಡೆಸಿಕೊಟ್ಟ ಸಭೆಯನ್ನು 7 ಗುಂಪುಗಳನ್ನಾಗಿ ವಿಂಗಡಿಸಲಾಗಿತ್ತು. ನೀಡಿದ ವಿಷಯಗಳು – ಲಖನೌನಲ್ಲಿ ಗುರುಗಳು ಕೊಟ್ಟ ಉಪನ್ಯಾಸಗಳು, ಸೇವೆ ಮತ್ತು ಸ್ವಪ್ರಗತಿ. ಪ್ರತಿಯೊಂದು ತಂಡವೂ ತಮ್ಮ ವಿಷಯ ಸಾರಾಂಶ ಮತ್ತು ಉಪಸ್ಂಹಾರವನ್ನು ಕೆಲವು ನಿಮಿಷಗಳ ಕಾಲ ಪ್ರಸ್ತುತ ಪಡಿಸಿದರು. ಕಾರ್ಯಕ್ರಮವು ಭ್ರಾತೃತ್ವದ ಸವಿ ಮತ್ತು ಪ್ರಿಯ ಗುರುಗಳ ಮೇಲಿನ ಪ್ರೀತಿ ಮತ್ತು ಕೃತಜ್ಞತೆಯನ್ನು ಸೂಸುತ್ತಿತ್ತು ಎಂದು ಭಾಗಿಗಳು ಅಭಿಪ್ರಾಯಪಟ್ಟರು.

## ಬೆಂಗಳೂರಿನ ಸ್ವಯಂಸೇವಕರ ಸ್ಮರಣಯೋಗ್ಯ ವಾರಾಂತ್ಯ

ಬೆಂಗಳೂರು ಕೇಂದ್ರವು ಪರಂಧಾಮ, ಜ಼ೋನಲ್ ಮತ್ತು ಬನಶಂಕರಿಯಲ್ಲಿ ಮೂರು ಆಶ್ರಮಗಳನ್ನು ಹೊಂದಿದೆ. ಅಭ್ಯಾಸಿಗಳಿಗೆ ಆಶ್ರಮದಲ್ಲಿ ಉಳಿದುಕೊಂಡು ಸೇವೆ ಸಲ್ಲಿಸುವ ಮತ್ತು ಆಧ್ಯಾತ್ಮಿಕ ವಾತಾವರಣದಲ್ಲಿ ಸಮಯ ಕಳೆಯುವ ಸದವಕಾಶಕ್ಕಾಗಿ ' ಆಶ್ರಮದಲ್ಲಿ ವಾರಾಂತ್ಯ' ಎಂಬ ಕಾರ್ಯಕ್ರಮವನ್ನು ಯೋಜಿಸಲಾಯಿತು. ಜೂನ್‌ನಲ್ಲಿ ವಲಯಾಶ್ರಮದಲ್ಲಿ ಮೊದಲ ಕಾರ್ಯಕ್ರಮ ನಡೆದಿದ್ದು ಬನಶಂಕರಿ ಆಶ್ರಮದಲ್ಲಿ ಜುಲೈ 10 ಮತ್ತು 11ರಂದು ನಡೆಸಲಾಯಿತು. ಅಭ್ಯಾಸಿಗಳಿ ಧ್ಯಾನಮಂದಿರ ಮತ್ತು ಸುತ್ತಲಿನ ಪ್ರದೇಶಗಳ ಸ್ವಚ್ಛತೆ, ಉಪಾಹಾರ ಮತ್ತು ಭೋಜನದ ತಯಾರಿ ಮುಂತಾದ ಕೆಲಸಗಳಲ್ಲಿ ಪಾಲ್ಗೊಂಡರು. ದಿನದ ಉತ್ತರಾರ್ಧದಲ್ಲಿ ಸೇವೆಯ ಅನೇಕ ಅಂಶಗಳು ಮತ್ತು ಸ್ವಯಂಸೇವೆಯನ್ನು ಕೈಗೆತ್ತಿಕೊಳ್ಳುವಾಗಿನ ಅಭ್ಯಾಸಿಗಳ ಮನೋವೃತ್ತಿಯನ್ನು ವಿವರಿಸಲು ಸಭೆ ನಡೆಸಲಾಯಿತು. ಭಾನುವಾರದಂದು ಸತ್ಸಂಗದ ನಂತರ ಬೆಂಗಳೂರು ಕೇಂದ್ರದ ವಿವಿಧ ಚಟುವಟಿಕೆಗಳ ಕುರಿತು ನೀಡಿದ ಪ್ರಸ್ತುತಿಯ ನಂತರ ಅನೇಕ ಅಭ್ಯಾಸಿಗಳು ತಾವೂ ಅದರಲ್ಲಿ ಪಾಲ್ಗೊಳ್ಳಲು ಉತ್ಸುಕತೆ ತೋರಿದರು.

ಪರಂಧಾಮದಲ್ಲಿ ಕಾರ್ಯಕ್ರಮವು ಆಗಸ್ಟ್ 13ರ ಸಂಜೆಯಂದು ಪ್ರಾರಂಭವಾಯಿತು. ಮುಂದಿನ ಎರಡು ದಿನಗಳಲ್ಲಿ ಸುಮಾರು 30 ಅಭ್ಯಾಸಿಗಳು ಕೈಗೂಡಿಸಿ ಮಕ್ಕಳ ಆಟದ ಉದ್ಯಾನಕ್ಕಾಗಿ ಜಾಗವನ್ನು ಸ್ವಚ್ಛಗೊಳಿಸಿದರು, ಮಳೆಕೊಯ್ಲಿನ ಜಾಲರಿಯನ್ನೂ, ತೊಟ್ಟಿಯನ್ನೂ ಸ್ವಚ್ಛಗೊಳಿಸಿದರು, ಪಾಕಶಾಲೆಯ ಉಗ್ರಾಣ ಮತ್ತು ಅಟ್ಟವನ್ನು ಸರಿಮಾಡಿದರು, ಧ್ಯಾನಮಂದಿರವನ್ನೂ, ತರಕಾರಿ ಬೆಳೆಯಲು ಜಾಗವನ್ನೂ ಸ್ವಚ್ಛಗೊಳಿಸಿದರು. ಭೋಜನದ ಮೊದಲು ಸ್ವಯಂಸೇವಕರೆಲ್ಲ 'ಸೇವೆ' ಕುರಿತು ಗುರುಗಳ ಉಪನ್ಯಾಸವನ್ನು ವೀಕ್ಷಿಸಿದರು. ಭೋಜನದ ನಂತರ ಅವರು ಸಮೀಪದ ಸರೋವರದ ಪ್ರಶಾಂತ ವಾತಾವರಣದಲ್ಲಿ ಪರಸ್ಪರರೊಂದಿಗೆ ಕಾಲ ಕಳೆದರು. ಕೆಲವು ಅಭ್ಯಾಸಿಗಳು ಭಂಡಾರದಲ್ಲಿ ಮತ್ತು ಗುರುಗಳೊಂದಿಗೆ ಕಳೆದ ಸಮಯದ ಅನುಭವಗಳನ್ನು ಹಂಚಿಕೊಂಡರು. ರಾತ್ರಿಯ ಶಿಬಿರಾಗ್ನಿಯು ಎಲ್ಲರ ಮುಖಗಳ ಮೇಲೆ ಹೊಳಪು ತಂದಿತು ಮತ್ತು ಮಕ್ಕಳು ಹಾಡುಗಳೊಂದಿಗೆ ಸೇರಿದ್ದ ಅಭ್ಯಾಸಿಗಳ ಮನ ರಂಜಿಸುತ್ತಾ ಆನಂದಿಸಿದರು. ರಾತ್ರಿಯ ಭೋಜನದ ನಂತರ ಚಲನಚಿತ್ರವನ್ನು ವೀಕ್ಷಿಸಿದರು.

ಮರುದಿನ ಮುಂಜಾನೆಯ ಸತ್ಸಂಗದ ನಂತರ ಕೇಂದ್ರದ ಮುಖ್ಯಸ್ಥರಾದ ಸೊ. ಪ್ರಭಾಕರ್‌ರವರು ನೀಡಿದ ಮುಕ್ತಾಯ ಭಾಷಣವು ಬಹಳ ಪ್ರೇರಣಕಾರಿಯಾಗಿತ್ತು. ಈ ಕಾರ್ಯಕ್ರಮವು ವಿವಿಧ ಸ್ಥಳಗಳ ಅಭ್ಯಾಸಿಗಳನ್ನು ಒಟ್ಟುಗೂಡಿಸಿ ಅವರ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅಪೂರ್ವ ಅವಕಾಶವನ್ನು ದೊರಕಿಸಿಕೊಟ್ಟಿತಲ್ಲದೆ ವಿವಿಧ ರೀತಿಯ ವಿಚಾರಧಾರೆಯಿಂದ ಅನೇಕ ಸಮಸ್ಯೆಗಳ ಪರಿಹಾರ ದೊರಕಿತು.

## ಯುವಜನರ ಸಮಯ : ಗಾಜ಼ಿಯಾಬಾದ್

ಜೂನ್ 26–27ರಂದು ಗಾಜ಼ಿಯಾಬಾದ್ ಕೇಂದ್ರವು ಯುವಜನರಿಗಾಗಿ ಎರಡು ದಿನಗಳ ವಸತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕಾರ್ಯಕ್ರಮದ ವಿಷಯವು 'ತಾರುಣ್ಯ: ಪ್ರತಿಜ್ಞೆ ಮತ್ತು ಪರಿಶ್ರಮಕ್ಕೆ ಸಕಾಲ' ಎಂಬುದಾಗಿತ್ತು. ಸೋ. ಮಹಾವೀರ್ ಸಿಂಗ್ ರೊಹಿಲಾರವರು ಸ್ವಾಗತ ಭಾಷಣವನ್ನು ನೀಡಿದ ನಂತರ 'ತಾರುಣ್ಯ'ದ ಮೇಲೆ ಗುರುಗಳು ನೀಡಿದ ಉಪನ್ಯಾಸವನ್ನು ಕೇಳಿಸಲಾಯಿತು. ನಂತರ ಸೋ. ಪ್ರೀತಿಯವರು 'ಪ್ರಾಶಸ್ತ್ಯ ನೀಡಲು ಕಲಿಯಿರಿ' ಎಂಬ ಚಟುವಟಿಕೆಯನ್ನು ನಡೆಸಿಕೊಟ್ಟರು. ಭೋಜನದ ನಂತರ ಸೋ. ಅನಿತಾರವರು ಆಸಕ್ತಿಯುತ ಆಟಗಳನ್ನು ನಡೆಸಿದರು. ಎರಡನೆ ದಿನ ಸತ್ಸಂಗದ ನಂತರ ವಿಚಾರಕ್ಕಿರುವ ಶಕ್ತಿಯ ಕುರಿತ ಸಾಕ್ಷ್ಯಚಿತ್ರ 'ಸೀಕ್ರೆಟ್'ನ್ನು ತೋರಿಸಲಾಯಿತು. ಸೋ. ಅನಿತಾರವರು 'ಸಮಾಜ ಮತ್ತು ನಿಸರ್ಗದ ಕಡೆಗಿನ ತರುಣರ ಜವಾಬ್ದಾರಿ'ಯನ್ನು ಪ್ರಸ್ತುತ ಪಡಿಸಿದರು. ಸೋ. ಜತಿನ್‌ರವರು 'ಮನಸಿನ ನಿಯಂತ್ರಣ'ದ ಬಗ್ಗೆ ಕಿರು ಚಟುವಟಿಕೆಯನ್ನು ನಡೆಸಿಕೊಟ್ಟರು ಮತ್ತು ಗುರುಗಳ ಉಪನ್ಯಾಸಗಳಿಂದ ಉಕ್ತಿಗಳನ್ನು ಪ್ರಸ್ತುತಪಡಿಸಿದರು. ಈ ಪ್ರಯತ್ನವನ್ನು ಎಲ್ಲಾ ಭಾಗಿಗಳೂ ಶ್ಲಾಘಿಸಿದರು.

## ಹೊಸ ಕೇಂದ್ರವಾದ ಜಮ್ಮುವಿನ ಸಮಾಚಾರ



ವನಮಹೋತ್ಸವದ ಅಂಗವಾಗಿ ಆಗಸ್ಟ್ 15ರಂದು ಜಮ್ಮುವಿನಲ್ಲಿ ಹೊಸದಾಗಿ ಖರೀದಿಸಿದ ಜಮೀನಿನಲ್ಲಿ ಗಿಡಗಳನ್ನು ನೆಡಲಾಯಿತು. ಜುಲೈ 2010ರಲ್ಲಿ ಸೀಮಾರೇಖೆಯಗೋಡೆಯ ನಿರ್ಮಾಣ ಮುಗಿದಿತ್ತು. ತೊಂಬತ್ತಕ್ಕೂ ಹೆಚ್ಚಿನ ಜಾತಿಗಳ ಸಸ್ಯಗಳು ಅರ್ಜುನ, ದೇವದಾರು, ಬೇವು, ನೆಲ್ಲಿ, ಪಂಚಸಿತಾರ, ಗುಲಾಬಿ, ಶೀಶಮ್, ಒಕ್ ಮುಂತಾದವುಗಳನ್ನು ಆಶ್ರಮ ನಿರ್ಮಾಣಕ್ಕೆಂದು ಖರೀದಿಸಿದ

ಒಂದೆಕೆರೆ ಜಾಗದಲ್ಲಿ ನೆಡಲಾಯಿತು. ಸುಡುಬಿಸಿಲಿನಲ್ಲಿ ಸಹ ಸುಮಾರು 30 ಅಭ್ಯಾಸಿಗಳು ಭಾಗವಹಿಸಿದ್ದರು. ಭೋಜನಗೃಹ, ಪಾಕಶಾಲೆ ಮತ್ತು ಶೌಚಾಲಯಗಳ ನಿರ್ಮಾಣನಕ್ಷೆಯನ್ನು ಗುರುಗಳ ಸಮ್ಮತಿಗಾಗಿ ನೀಡಲಾಗಿದೆ.

## ದಾವಣಗೆರೆ, ಕರ್ನಾಟಕ ಆಶ್ರಮ ಕಟ್ಟಡ.



ದಾವಣಗೆರೆ ಕೇಂದ್ರವು, ಬೆರಣೆಕೆಯಷ್ಟು ಅಭ್ಯಾಸಿಗಳಿಂದ ಪ್ರಾರಂಭಿಸಿ, ಈಗ ಒಂದುನೂರು ಅಭ್ಯಾಸಿಗಳವರೆಗೆ ಬೆಳೆದಿದೆ. ರವಿವಾರದ ಸತ್ಸಂಗಗಳು ಅಭ್ಯಾಸಿಗಳ ಮನೆಗಳಲ್ಲಿ ನಡೆಸಲಾಗುತ್ತಿತ್ತು. ಸಂಖ್ಯೆ ಬೆಳೆದಂತೆಲ್ಲ, ಪಾಠಶಾಲೆಯು ಇದಕ್ಕೆ ಸ್ಥಾನವಿತ್ತಿತು. ಕೇಂದ್ರವು ಬೆಳೆದಂತೆಲ್ಲಾ ಒಂದು ಆಶ್ರಮವನ್ನು ಪಡೆದುಕೊಳ್ಳುವ ಆವಶ್ಯಕತೆಯುಂಟಾಯಿತು, ಮತ್ತು ಮಿಷನ್ನಿನಸಲುವಾಗಿ ಎರಡು ಎಕರೆ ಜಮೀನನ್ನು ಕೊಂಡುಕೊಂಡ ನಂತರ ಇದು ಕಾರ್ಯರೂಪಕ್ಕೆ ಬಂದಿತು. ಫೆಬ್ರುವರಿ 2, 2009, ರಂದು ಭೂಮಿಪೂಜೆ, ಮತ್ತು ಎಪ್ರಿಲ್ 25,2010 ರಂದು ಸತ್ಸಂಗವನ್ನು ನೆರವೇರಿಸಲಾಯಿತು. ಧ್ಯಾನಮಂದಿರ ಹಾಗು ಅಡುಗೆಸಂಕುಲಗಳ ಗುರುತು ಹಾಕುವದರೊಂದಿಗೆ ಕೆಲಸದ ಪ್ರಾರಂಭವಾಯಿತು. ಧ್ಯಾನಮಂದಿರ ಹಾಗು ಜಗುಲಿ ಕೂಡಿ,45ಅಡಿx45ಅಡಿ. ಮತ್ತು ಅಡುಗೆಮನೆ, ಭಂಡಾರ ಹಾಗು ಕಾರ್ಯಾಲಯಗಳಿಂದ ಕೂಡಿದ ಕಟ್ಟಡವು 60ಅಡಿx15ಅಡಿ ಆಕಾರದ ಕಟ್ಟಡಗಳಿವೆ.

ಈಗ ಧ್ಯಾನಮಂದಿರದ ಕಟ್ಟಡ ಪಾಯದ ಮೇಲಿನವರೆಗೂ ಆಗಿದ್ದು, ಅಡುಗೆಸಂಕುಲದ ಛಾವಣಿಯನ್ನು ಹಾಕಲಾಗಿದೆ. ಕಟ್ಟಡದ ಕೆಲಸ, ಕುಡಿಯುವನೀರು, ಹಾಗೂ ತೋಟಗಾರಿಕೆಯ ಸಲುವಾಗಿ ಇನ್ನೊಂದು ಕೊಳವೆಬಾವಿಯನ್ನು ತೋಡಲಾಗಿದೆ. ಪರಿಸರವನ್ನು ಹಸಿರಾಗಿಡಲು 60 ಸಾಗವಾನಿ,10 ಬೇವು, 10 ಹೊಂಗೇಮರ, ಮತ್ತು ಕೆಲವು ತೆಂಗಿನ ಗಿಡಗಳನ್ನು ನೆಡಲಾಗಿದೆ. ಈ ವರ್ಷದ ಅಕ್ಟೋಬರ್ ತಿಂಗಳವರೆಗೆ ಆಶ್ರಮದ ಕಟ್ಟಡವು ಸಿದ್ಧವಾಗುವ ನಿರೀಕ್ಷೆ ಇದೆ.



## ಮಕ್ಕಳಿಗಾಗಿ ಮೌಲ್ಯಾಧಾರಿತ ಕಾರ್ಯಕ್ರಮ.

### ಹಥ್ರಾಸ, ಮಧ್ಯ ಪ್ರದೇಶ.

ಹಥ್ರಾಸ ಕೇಂದ್ರವು ದಿ.27,ಜೂನ್ ರಂದು,ಆಯೋಜಿಸಿದ VBSE ಕಾರ್ಯಕ್ರಮದಲ್ಲಿ 30 ಮಕ್ಕಳು ಅತಿ ಹುರುಪು ಮತ್ತು ಉತ್ಸಾಹದಿಂದ ಪಾಲ್ಗೊಂಡರು. ಕಾರ್ಯಕ್ರಮವು ಐದು ನಿಮಿಷದ ಪ್ರಾರ್ಥನಾ ಧ್ಯಾನದೊಂದಿಗೆ ಪ್ರಾರಂಭ ವಾಯಿತು. ಸಹೋದರ ಅರವಿಂದರವರು ಸಹಜಮಾರ್ಗ ಮತ್ತು ಅದರ ದೃಷ್ಟಿಕೋನದ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿದರು. ಸಹೋದರ ಋಷಿರಾಜಸಿಂಗ್ ರವರು ನಮ್ಮ ನಿತ್ಯ ಜೀವನದಲ್ಲಿ ವ್ಯಾಯಾಮ, ಆರೋಗ್ಯ ಮತ್ತು ನೈರ್ಮಲ್ಯಗಳ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು ಹಾಗೂ ಅವರು ಲಕ್ಷ್ಯಕೊಟ್ಟು ಕೇಳಿಕೊಂಡರು,ಮತ್ತು ಟಿಪ್ಪಣಿಗಳನ್ನು ಮಾಡಿಕೊಂಡರು. ಸಹೋದರರಾದ ಅಮಿತ್, ಹರೇಂದ್ರ ಮತ್ತು ಇತರ ಸ್ವಯಂಸೇವಕರು ಅನೇಕ ಹಾಸ್ಯಚುಟುಕೆಗಳು, ಅಂತಾಕ್ಷರಿ, I.Q. ಮತ್ತು ಸಾಮಾನ್ಯ ಜ್ಞಾನಗಳಮೇಲೆ ಆಟಗಳನ್ನು ಆಯೋಜಿಸಿ ಶಿಬಿರದಲ್ಲಿ ಕಲಿಯುವುದನ್ನು ಮೋಜಿನದನ್ನಾಗಿ ಮಾಡಿದರು. ಈ ಬೇಸಿಗೆಯ ಶಿಬಿರದಲ್ಲಿ ಪಾಲ್ಗೊಂಡವರಿಗೆ ಸ್ಮೃತಿಚಿನ್ಹೆಗಳ ವಿತರಣೆಯೊಂದಿಗೆ ಕಾರ್ಯಕ್ರಮದ ಮುಕ್ತಾಯವಾಯಿತು

### ಇಂದೋರ್, ಮಧ್ಯಪ್ರದೇಶ




ಇಂದೋರ್ ಕೇಂದ್ರವು ದಿ. 21 ಜೂನ್ ದಿಂದ 25 ನೇ ಜೂನ್ ವರೆಗೆ ಐದು ದಿನದ ಆಯೋಜಿತ VBSE ಮಕ್ಕಳಕಾರ್ಯಕ್ರಮದಲ್ಲಿ ಸುಮಾರು 70 ಮಕ್ಕಳು ಹಾಜರಿದ್ದರು. ಈ ಕೇಂದ್ರವು ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣವನ್ನೀಯಲು ಆಯೋಜಿಸುತ್ತಿರುವ ಕಾರ್ಯಕ್ರಮಗಳಲ್ಲಿ ಇದು ಅನುಕ್ರಮವಾಗಿ ಹನ್ನೆರಡನೆಯದಾಗಿದೆ.

VBSE ಸತ್ರಗಳನ್ನು,ಮಣ್ಣಿನ ಕಲಾಕೃತಿ, ಗ್ಲಾಸಪೇಂಟಿಂಗ್, ನೃತ್ಯ ಹಾಗು ಜ್ವಾಲೆಇಲ್ಲದೆ ಅಡುಗೆ ಮಾಡುವುದು ಇಂತಹ ಇತರ ಚಟುವಟಿಕೆಗಳೊಂದಿಗೆ ಕೈಗೊಳ್ಳಲಾಗಿತ್ತು.

ಮಿಷನ್ನಿನ ಪ್ರಾರ್ಥನೆ, ಐದು ನಿಮಿಷಗಳ ಮೌನ ನಂತರ ಯೋಗಸಾಧನೆಯ ಚಟುವಟಿಕೆಗಳೊಂದಿಗೆ ದಿನದ ಪ್ರಾರಂಭವಾಯಿತು. ನಂತರದ ಹತ್ತು ನಿಮಿಷಗಳಕಾಲ ಅಮೂಲ್ಯ ಸಂದೇಶವುಳ್ಳ ಚಲನಚಿತ್ರದ್ದಾಗಿತ್ತು. ಆ ಮೇಲೆ ಮಕ್ಕಳೆಲ್ಲರು ಮುಂದಿನ ಎರಡು ಗಂಟೆಗಳಕಾಲ ತಮ್ಮ ತಮ್ಮ ಗುಂಪುಗಳಲ್ಲಿ ಸೇರಿಕೊಂಡರು. ಅವರು ವಿವಿಧ ಚಟುವಟಿಕೆಗಳ ಮುಖಾಂತರ, ಪರಸ್ಪರರಲ್ಲಿ ಹಂಚಿಕೊಳ್ಳುವುದು, ಒಬ್ಬರೊನ್ನಬ್ಬರು ತಿಳಿದುಕೊಳ್ಳುವುದು ಹಾಗು ಸಹಕಾರ ಭಾವನೆಗಳಂತಹ ಮೌಲ್ಯಗಳನ್ನು ಕಲಿತುಕೊಂಡರು.

### ಪಿಲಿಭಿತ್( ಉತ್ತರ ಪ್ರದೇಶ)

ಪಿಲಿಭಿತ್ ಕೇಂದ್ರವು ದಿ.11 ಜೂನ್ ದಿಂದ 20 ಜೂನ್ ವರೆಗೆ, 10 ರಿಂದ 14 ರ ವಯೋಮಾನದಲ್ಲಿಯ ಮಕ್ಕಳಿಗಾಗಿ VBSE ಬೇಸಿಗೆಯ ಶಿಬಿರವನ್ನು ಹಮ್ಮಿಕೊಂಡಿತ್ತು. ಈ ಶಿಬಿರದಲ್ಲಿ 40 ಮಕ್ಕಳು ಅತಿ ಉತ್ಸಾಹದಿಂದ ಪಾಲ್ಗೊಂಡರು. ಕಾರ್ಯಕ್ರಮವು ಬೆಳಿಗ್ಗೆ 6-30 ಕ್ಕೆ ಪ್ರಾರಂಭವಾಗಿ, ಚಟುವಟಿಕೆಗಳನ್ನು ಬೇರೆ ಬೇರೆ ಸತ್ರ ಗಳಲ್ಲಿ ವಿಂಗಡಿಸಲಾಯಿತು. ಮೊದಲನೇಯ ಸತ್ರದಲ್ಲಿ ವ್ಯಾಯಾಮ, ಪ್ರಾರ್ಥನೆ ಮತ್ತು ಧ್ಯಾನಗಳಲ್ಲದೆ, VBSE ಯ ಪಠ್ಯಕ್ರಮದ ಒಂದು ವಿಷಯವನ್ನು ಸೇರಿಸಲಾಗಿತ್ತು. ಇದರೊಂದಿಗೆ, ವೃತ್ತಪತ್ರ, ಸಂಚಾರ ನಿಯಮ, ಅಂಚೆವಿಭಾಗ, ಸಮಯನಿರ್ವಹಣೆ, ಕಂಪ್ಯೂಟರ್, ಆರೋಗ್ಯ ಮುಂತಾದ ವಿವಿಧ ಕ್ಷೇತ್ರಗಳಿಂದ ಬಂದ ಅತಿಥಿಗಳಿಂದ ಸಾದರಪಡಿಸಲಾದ ಭಾಷಣಗಳು ಹಾಗು ಪ್ರದರ್ಶನಗಳು ಇದ್ದವು.

ಒರಿಗಾಮಿ, ಹಸ್ತಕಲೆ, ವರ್ಣಚಿತ್ರಕಲೆ, ಹಾಡುಗಾರಿಕೆ, ನಿಬಂಧ ಲೇಖನ ಹಾಸ್ಯಚುಟುಕೆಗಳಂತಹ ಚಟುವಟಿಕೆಗಳನ್ನು ನಡೆಸಲಾಯಿತು. ಶಿಬಿರದ ಕೊನೆಯ ದಿನದಂದು ಮಕ್ಕಳಿಂದ ಪ್ರದರ್ಶಿಸಲ್ಪಟ್ಟ ಹಾಡುಗಾರಿಕೆ ಮತ್ತು ನೃತ್ಯಕಲೆಗಳನ್ನು ವೀಕ್ಷಿಸಲು ಪಾಲ್ಗೊಂಡ ಮಕ್ಕಳ ಪಾಲಕರನ್ನು ಆಮಂತ್ರಿಸಲಾಗಿತ್ತು.

# ಪ್ರಭಾ ಕೇಂದ್ರ

"ಜೀವನವು ಒಂದು ಶಾಶ್ವತ ಶಿಕ್ಷಣಕ್ರಮ......ಇದಕ್ಕೆ ಅಂತ್ಯವಿಲ್ಲ. ಇದು ಅನಾದಿ ಅನಂತ. ಈ ಶಿಕ್ಷಣವು ಎಲ್ಲಿ ಪ್ರಾರಂಭಿಸಿತೋ ನಾವರಿವೆವು.ಇದು ಎಂದೆಂದಿಗೂ ಮುಗಿಯದು. ಏಕೆಂದರೆ, ನಾವು ಹೇಗೆ ವಿಕಾಸದತ್ತ ಮೇಲೇರುತ್ತಾ ಮುಂದೆ ಸಾಗುವೆವೋ ಹಾಗೆಯೇ ಕೆಲಸವನ್ನೂ ಮುಂದುವರಿಸುವೆವು."



## ನಾಟರಂಪಲ್ಲಿ (ತಮಿಳು ನಾಡು)

ನಾಟರಂಪಲ್ಲಿ ಆಶ್ರಮವು ಅಕ್ಟೋಬರ್ 2004 ರಲ್ಲಿ ಶ್ರೀ ಓಂ ಪ್ರಕಾಶ್ ಎಂಬವರಿಂದ ಮಿಷನ್ನಿಗೆ ದೇಣಿಗೆಯಾಗಿ ದೊರೆಯಿತು. ನಂತರ ಇವರು ಅಭ್ಯಾಸಿ ಹಾಗು ಪ್ರಶಿಕ್ಷಕರೂ ಆದರು. ನಾಟರಂಪಲ್ಲಿ ಆಶ್ರಮವು, ಸದ್ಗುರುಗಳು ಚೆನ್ನೈ ಮತ್ತು ಬೆಂಗಳೂರಿಗೆ ದಾರಿ ಮೂಲಕ ಪ್ರವಾಸ ಕೈಗೊಂಡಾಗ ಒಂದು ಅನುಕೂಲವಾದ ತಂಗುದಾಣವಾಗಿದೆ. ಇದು ಗುಡ್ಡಗಳಿಂದ ಸುತ್ತುವರಿದ ಹಳ್ಳಿಯ ಮಧ್ಯಭಾಗದ ಆಕರ್ಷಕ ಪರಿಸರದಲ್ಲಿದ್ದು, ಯಲಗಿರಿ ಪರ್ವತಗಳು ಇಲ್ಲಿಂದ 20 ಕಿ.ಮೀ. ದೂರದಲ್ಲಿವೆ. ಮೂಲದ ಒಂದು ಎಕರೆಯ ಜಾಗವು ಲಂಬವಾಗಿಯೂ ಕಡಿಮೆ ಅಗಲವಾಗಿಯು ಇದ್ದು, ಉದ್ದವಾಗಿ ಕಟ್ಟಲಾದ ಆಶ್ರಮ ಕಟ್ಟಡವು ದೂರದಿಂದ ಯುದ್ಧನೌಕೆಯಂತೆ ಕಾಣುತ್ತದೆ. ಬಹುಶಃ ಕಟ್ಟಡದ ರೂಪದಲ್ಲಿ ಹಾಗು ಉಪಯೋಗಿಸಲು ಸಿದ್ಧವಾದ ಸ್ಥಿತಿಯಲ್ಲಿ ಮಿಷನ್ನಿಗೆ ದೊರೆತ ಕೆಲವೇ ಆಶ್ರಮಗಳಲ್ಲೊಂದಾಗಿದೆ. ಉದಾರ ದೇಣಿಗೆದಾರರಿಗೆ ಈ ಕಟ್ಟಡದ ವಿಸ್ತಾರ ಕಾರ್ಯಕ್ಕೆ ಸಂಪನ್ಮೂಲಗಳ ಉಪಲಬ್ಧತೆಗೆ ಅನುಗುಣವಾಗಿ ಹಂತ ಹಂತವಾಗಿ ಕಟ್ಟಲ್ಪಟ್ಟಿದ್ದು, ಕಟ್ಟಡದ ಕ್ಷಮತೆಯು ಈ ಆಕಾರದ ಆಶ್ರಮಕ್ಕಾಗಿ ಮಹತ್ವದ್ದಾಗಿದೆ.

ಈ ಆಶ್ರಮವು ದೇಣಿಗೆಯಾಗಿ ಕೊಡುವಾಗ ಕೂಡ, 2000 ಅಭ್ಯಾಸಿಗಳು ಧ್ಯಾನಕ್ಕಾಗಿ ಉಪಯೋಗಿಸುವಷ್ಟು ಹಾಲ್, 500 ಜನಕ್ಕೆ ಅನುಕೂಲ ವಾಗುವಂತೆ ವಾಸಸ್ಥಾನ ಅಡುಗೆ ಹಾಗೂ ಊಟದ ಸ್ಥಳಗಳನ್ನು ಹೊಂದಿತ್ತು. ಚಿಕ್ಕದಾದ ಎರಡು ಕಟ್ಟಡಗಳನ್ನು ಗುರುಗಳ ನಿವಾಸ ಹಾಗು ಗ್ರಂಥಾಲಯವಾಗಿ ಮಾರ್ಪಡಿಸಲಾಗಿದೆ.

ಈ ಆಶ್ರಮವು SRCM ಕೇಂದ್ರ ಮತ್ತು ಉಪಕೇಂದ್ರಗಳ ಮಧ್ಯಭಾಗದಲ್ಲಿದ್ದು ಅಧ್ಯಾತ್ಮಿಕ ಒಕ್ಕೂಟಗಳಿಗಾಗಿ ಅನುಕೂಲಕರ ಸ್ಥಳವಾಗಿದೆ. ರವಿವಾರದ ಸತ್ಸಂಗಗಳಲ್ಲಿ ಸಮೀಪದ ಕೇಂದ್ರಗಳಾದ ತಿರುಪುತ್ತೂರು, ವಿನಾಯಂಬಾಡಿ, ವೆಲ್ಲುಕೊಟ್ಟಾಯಿ, ಮತ್ತು ಪಾಚೂರುಗಳಲ್ಲಿಯ ಅಭ್ಯಾಸಿಗಳು ಉಪಸ್ಥಿತರಿರುತ್ತಾರೆ. ಅದಲ್ಲದೆ ಮಾಸಿಕ ಪೂರ್ಣದಿನದ ಕಾರ್ಯಕ್ರಮಗಳಲ್ಲಿ ಹೊಸೂರು, ಕೃಷ್ಣಗಿರಿ, ಬರಗೂರು, ಕಾವೇರಿಪಟ್ಟಣಂ, ಕುಪ್ಪಮ್, ಪಣಂದೂರು, ಜಡದೇವಿ, ವಿ. ಕೋಟೆ, ಅರ್ಣಿ ಮತ್ತು ವೆಲ್ಲೂರು ಮುಂತಾಗಿ ಒಟ್ಟು 200 ಅಭ್ಯಾಸಿಗಳು ಹಾಜರಿರುತ್ತಾರೆ.

ಈ ಆಶ್ರಮವು ಅಗಸ್ಟ 2005 ರಲ್ಲಿ ಕೇರಳಪ್ರದೇಶದ ಪ್ರಶಿಕ್ಷಕರ ಸೆಮಿನಾರ್ ಮತ್ತು ಡಿಸೆಂಬರ್ 2006 ರಲ್ಲಿ ಮೂರು ವಾರದ ಅಂತರರಾಷ್ಟ್ರೀಯ ವಿದ್ಯಾರ್ಥಿವೇತನ ಪ್ರಶಿಕ್ಷಣ ಕಾರ್ಯಕ್ರಮದ ಯಜಮಾನಿಕೆಯನ್ನು ವಹಿಸಲು ಗುರುಗಳ ಆಯ್ಕೆಯಾಗಿತ್ತು.

ಈ ಎರಡು ವರ್ಷಗಳಲ್ಲಿ ಆಶ್ರಮದ ಇಬ್ಬದಿಗೂ ಇರುವ ಸುಮಾರು 1.75 ಎಕರೆ ಹಾಗೂ 0.94ಎಕರೆ ಹೆಚ್ಚುವರಿ ಜಮೀನನ್ನು ಕೊಂಡುಕೊಳ್ಳಲಾಗಿದೆ. ದೊಡ್ಡದಾದ ಜಾಗದಲ್ಲಿ ತರಕಾರಿ, ಹಣ್ಣಿನಗಿಡ, ಹೂಗಿಡಗಳನ್ನು ನೆಡಲಾಗಿದ್ದು, ಅಭ್ಯಾಸಿಗಳಿಗೆ ಸೇವೆಸಲ್ಲಿಸಲು ಹಾಗು ಈ ಕಾರ್ಯದಲ್ಲಿ ಒಂದಾಗಿರುವಂತೆ ಮಾಡಲು ಅನುಕೂಲಕರವಾದ ಸ್ಥಳವಾಗಿದೆ.

ಸ್ವಲ್ಪಮಟ್ಟಿಗೆ ಆದಾಯವನ್ನು ಪಡೆಯಲೋಸುಗ ಒಂದು ದೊಡ್ಡ ಪಪಾಯಿ ತೋಟವನ್ನು ಬೆಳೆಸಲಾಗಿದ್ದು, ಅದು ಗುರುಗಳ ಹೊಗಳಿಕೆಯನ್ನು ಪಡೆಯಿತು. ಅವರು ಈ ಪಪಾಯಿಯು ಇಡೀ ದೇಶದಲ್ಲಿಯೇ ಅತ್ಯಂತ ರುಚಿಕರವಾಗಿದೆ ಎಂದರು.

ನಾಟರಂಪಲ್ಲಿಯ ಆಶ್ರಮವು ತಳಮಳ ಹೃದಯಗಳಿಗೊಂದು ಅಧ್ಯಾತ್ಮಿಕ ಉದ್ಯಾನವಾಗಿದ್ದು, ಈ ಮುಂಬರುವ ವರುಷಗಳಲ್ಲಿಯೂ ಹೀಗೆಯೇ ಅವರ ಬೆಳವಣಿಗೆ ಹಾಗು ಪೋಷಣೆಯ ಕಾರ್ಯವನ್ನೆಸಗುತ್ತಿರುತ್ತದೆ.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2009 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.